ಅಪರಂಜಿ

ಮೇ 2003

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ಎಚ್.ಕೆ. ರಂಗನಾಥ್

ಭಕ್ತ

ಶಿವು

ಎಸ್.ಎನ್. ಶ್ರೀಧರಮೂರ್ತಿ

ನೂರಿ ಹಾರ್ದಳ್ಳಿ

ಹೆಚ್. ಗೋಪಾಲಕೃಷ್ಣ

ಶ್ಯಾಮಲ ರವಿಶಂಕರ್

ಕಮಲಾ ರಾಮಸ್ವಾಮಿ

ಎಂ.ಆರ್. ರಘುನಾಥ್

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಸಂಪಾದಕ:
ಶಿವಕುಮಾರ್

ಉಪ ಸಂಪಾದಕ:
ಬೇಲೂರು ರಾಮಮೂರ್ತಿ

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ ರೂ. 60
ಹತ್ತು ವರ್ಷದ ಚಂದಾ ರೂ. 500


Ph: 3345259
email : aparanji@hotmail.com
website : aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ಮೇ - 2003 ಸಂಚಿಕೆ - 8

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು - 27



○ ಪ್ರಕಾಶ್

ಮಾಜೀ ಪ್ರೆಸಿಡೆಂಟ್ ಜಿಮ್ಮಿ ಕಾರ್ಟರ್ ತಮ್ಮ ನೊಬೆಲ್ ಪೀಸ್ ಪ್ರೈಸ್ ವಾಪಸ್ ಮಾಡುತ್ತಾರಂತೆ!!

★★★

ಜೂನ್‌ನಲ್ಲಿ ಮಧುಮೇಹ ತಡೆಯಿರಿ ಶಿಬಿರ
- ಶೀರ್ಷಿಕೆ

ಜುಲೈನಲ್ಲಿ, ಸದ್ಯ ಪಥ್ಯ ಇರುಲ್ಲ!!

★★★

ಸಿ.ಇ.ಟಿ. ಎಂದರೇನು?

Commercialisco Eracation Technology!!

★★★

ಅಗ್ನಿ ಶಾಮಕ ಇಲಾಖೆ ಹಗರಣ; ಅಧಿಕಾರಿಗಳಿಗೆ ಶಿಕ್ಷೆ
- ಚೆನ್ನೈ ಸುದ್ದಿ

ಲಂಚಕೋರತನವನ್ನ ಸುಟ್ಟುಹಾಕಲು ಸಾಧ್ಯವೆ?

★★★

ಯುದ್ಧವನ್ನು ಧರ್ಮದಿಂದ ತಡೆಯಲು ಸಾಧ್ಯವಿಲ್ಲ
- ಹೇಳಿಕೆ

ಹಾಗೇ ಕಾಣುತ್ತೆ!!

★★★

ವರ್ಷದೊಳಗೆ ಮೆಟ್ರೋ ರೈಲು: ಕ್ರಮದ ಭರವಸೆ
- ಅನಂತಕುಮಾರ್

ಅರ್ಥವಾಯಿತು!!

★★★

ಚಂದ್ರಿಕಾ ಅವರು ಸಾಯಿಬಾಬಾ ನಂತರ ವಾಜಪೇಯಿ ಅವರನ್ನು ಭೇಟಿ ಮಾಡಿದ್ದಕ್ಕೆ ಅನರ್ಥ ಕಲ್ಪಿಸಬಾರದು!

★★★

ಸಾರ್ಸ್ ಸಾಂಕ್ರಾಮಿಕ ಎದುರಿಸಲು ಸಜ್ಜು
- ಸುಷ್ಮಾ ಸ್ವರಾಜ್

ವೈರಸ್‌ಗಳು ಮಾಸ್ಕ್ ಅತಿಕ್ರಮಿಸಬಾರದು ಎಂದು ಸರ್ಕ್ಯುಲರ್ ಹೊರಡಿಸುತ್ತಾರೋ?!

★★★



ಇನ್ನು ಮೇಲೆ ಆ ಬುಷ್ ಜೊತೆ ಸೇರಬೇಡಿ.
ಯಾಕೋ ನಿಮ್ಮ ರೂಪಾನೇ ಬದಲಾಗ್ತಾ ಇದೆ

ನಮ್ಮ ನಿಮ್ಮಲ್ಲಿ

ಹಾಸ್ಯಬ್ರಹ್ಮದ ಗೆಳೆಯರು ಇತ್ತೀಚೆಗೆ ''ಹಾಸ್ಯಬ್ರಹ್ಮ ಟ್ರಸ್ಟ್'' ಎಂಬ ಒಂದು ಟ್ರಸ್ಟ್ ರಚಿಸಿಕೊಂಡಿದ್ದಾರೆ. ''ಹಾಸ್ಯೋತ್ಸವ ಬ್ರಹ್ಮ''ರಾದ ಗೆಳೆಯ ಕೃಷ್ಣ ಸುಬ್ಬರಾಯರ ನೇತೃತ್ವದಲ್ಲಿ ಪ್ರಾರಂಭವಾಗಿರುವ ಈ ಟ್ರಸ್ಟ್‌ಗೆ ಅಪರಂಜಿ ಬಳಗದ ಎಲ್ಲರ ತುಂಬು ಹೃದಯದ ಅಭಿನಂದನೆಗಳು. ಅಪರಂಜಿಯ ಮೊದಲ ಹುಟ್ಟು ಹಬ್ಬದಲ್ಲಿ ಆಶೀರ್ವದಿಸಿ, ಆಗಿನಿಂದಲೂ ಅವಳಿಗೆ ಮಾರ್ಗದರ್ಶನ ನೀಡುತ್ತಿರುವ ಸನ್ಮಿತ್ರ ಅ.ರಾ. ಮಿತ್ರರು ಹಾಸ್ಯಬ್ರಹ್ಮ ಟ್ರಸ್ಟಿಗೂ ಮಾರ್ಗದರ್ಶಕರಾಗಿರುವುದು ನಿಜಕ್ಕೂ ಸಂತಸದಾಯಕ ಸಂಗತಿ. ಯಾವುದೇ ಒಂದು ಒಳ್ಳೆಯ ಕೆಲಸಕ್ಕೆ ಜನ ಒಟ್ಟುಗೂಡಿದಾಗ, ವ್ಯಕ್ತಿಗತ ಮಿತಿಗಳನ್ನು ಮೀರಿ ಕೆಲಸ ಮುಂದುವರಿಯಬೇಕಾದರೆ ಆ ಸಂಘಟಣೆಗೆ ಒಂದು ಸಾಂಪ್ರದಾಯಿಕ ಚೌಕಟ್ಟು ಇರುವುದು ಅಪೇಕ್ಷಣೀಯ. ಈ ದೃಷ್ಟಿಯಿಂದಲೂ ಟ್ರಸ್ಟ್ ರಚನೆ ಒಂದು ಆರೋಗ್ಯಕರ ಬೆಳವಣಿಗೆ ಎಂದು ಖಂಡಿತವಾಗಿ ಹೇಳಬಹುದು. ಕನ್ನಡ ಸಾರಸ್ವತ ಲೋಕಕ್ಕೆ, ಅದರಲ್ಲೂ ಮುಖ್ಯವಾಗಿ ಹಾಸ್ಯಸಾಹಿತ್ಯ ಪ್ರಪಂಚಕ್ಕೆ ''ಕೊರವಂಜಿ ಅಪರಂಜಿ ಟ್ರಸ್ಟ್'' ಮತ್ತು ''ಹಾಸ್ಯಬ್ರಹ್ಮ ಟ್ರಸ್ಟ್'' ಈ ಎರಡೂ ಸಂಸ್ಥೆಗಳಿಂದ ಮೌಲ್ಯಯುತ ಕೊಡುಗೆ ಸಲ್ಲಲಿ ಎಂದು ಆಶಿಸುವೆ.

ಕಳೆದ ಅನೇಕ ವರ್ಷಗಳಿಂದ ಬಿಡುವಿಲ್ಲದೇ ದುಡಿದು ಅಪರಂಜಿಯನ್ನು ಪಾಲಿಸಿಕೊಂಡು ಬಂದಿರುವವರಲ್ಲಿ ಬೇಲೂರು ರಾಮಮೂರ್ತಿಯವರದ್ದು ಒಂದು ಮುಖ್ಯ ಹೆಸರು. ಯಾವುದೇ ಕ್ಲಿಷ್ಟ ಪರಿಸ್ಥಿತಿಯನ್ನು ನಗುನಗುತ್ತಲೇ ಎದುರಿಸಿ ಅದನ್ನು ಪರಿಹರಿಸಿಬಿಡುವ ಚಾಕಚಕ್ಯತೆ ಬೇಲೂರರಿಗಿದೆ. ಇಂದಿನಿಂದ ಇವರು ಅಪರಂಜಿಯ ಉಪ ಸಂಪಾದಕತ್ವವನ್ನು ವಹಿಸಿಕೊಂಡು ನನ್ನ ಭಾರವನ್ನು ಬಹುಮಟ್ಟಿಗೆ ಹಂಚಿಕೊಂಡಿದ್ದಾರೆ. ಇವರಿಗೆ ನಾನು ಆಭಾರಿ.

– ಶಿವಕುಮಾರ್

ಎಚ್.ಕೆ. ರಂಗನಾಥ್


ಮೊನ್ನೆ ಭಾರತೀಯ ವಿದ್ಯಾಭವನದಲ್ಲಿ ದಿವಂಗತ ರಂಗನಾಥ್‌ರವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವ ಕಾರ್ಯಕ್ರಮವೊಂದು ನಡೆಯಿತು. ಆರು ಘಂಟೆಗೆ ಸರಿಯಾಗಿ ಶ್ಯಾಮಲಾ ಭಾವೆಯವರಿಂದ ಸುಶ್ರಾವ್ಯವಾದ ಭಜನೆಯ ನಂತರ, ರಂಗನಾಥ್‌ರವರ ಇಬ್ಬರು ಹೆಣ್ಣುಮಕ್ಕಳು ತಮ್ಮ ತಂದೆಯವರಿಗೆ ಪ್ರಿಯವಾದ ಎರಡು ದೇವರ ನಾಮಗಳನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿದರು. ಅದರ ನಂತರ 'ವೇದಿಕೆಯ ಮೇಲಿನ ಗಣ್ಯ' ರಿಂದ ಎಂದಿನಂತೆ ಮೂಡಿಬಂದ ಒಂದೆರಡು ಸಂತಾಪದ ಮಾತುಗಳನ್ನು ಕೇಳಿದಾಗ, ರಂಗನಾಥ್ ಇದ್ದಿದ್ದರೆ, ಇವರೆಲ್ಲರನ್ನೂ ಸರಿಯಾಗಿ ಲೇವಡಿ ಮಾಡುತ್ತಿದ್ದರು ಅನ್ನಿಸಿತು.

ನಾನು ರಂಗನಾಥ್‌ರವರನ್ನು ಮೊದಲು ಭೇಟಿ ಮಾಡಿದ್ದು ಅಪರಂಜಿಗೆ ಒಂದು ವರ್ಷ ತುಂಬಿದಾಗ. ಇದೇ ಭಾರತೀಯ ವಿದ್ಯಾಭವನಕ್ಕೆ ಬಂದು ಮಹಡಿ ಮೆಟ್ಟಲು ಹತ್ತಿ ಅವರ ಕೊಠಡಿಯೊಳಗೆ ನುಗ್ಗಿ ನನ್ನ ಪರಿಚಯ ಮಾಡಿಕೊಂಡಾಗ, ''ಪರಿಚಯ ಏನ್ರೀ, ನಿಮ್ಮಪ್ಪ ನನಗೆ ತೀರ ಆತ್ಮೀಯರಾಗಿದ್ದರು. ಬನ್ನಿ ಕೂಡಿ'' ಅಂತ ವಿಶ್ವಾಸದಿಂದ ಬರಮಾಡಿಕೊಂಡು ಕಾಫಿ ತರಿಸಿಕೊಟ್ಟಿದ್ದರು... ಅದಾದ ನಂತರ ಅಪರಂಜಿ ಬಳಗದ ಶೀನುವಿನ ದೆಸೆಯಿಂದ ರಂಗನಾಥ್ ಹತ್ತಿರದ ಮಿತ್ರರೂ ಆದರು. ಜಯನಗರದಲ್ಲಿ ಶೀನುವಿನ ಮನೆ ರಂಗನಾಥರ ಮನೆಯ ಪಕ್ಕಕ್ಕೇ ಇತ್ತು. ರಂಗನಾಥ್, ಶೀನು ಮತ್ತು ನಾನು ಕ್ಲಬ್ಬಿನಲ್ಲಿ ಕೂತು ಹರಟಿದ ಅನೇಕ ಸಂಜೆಗಳ ನೆನಪು ಇಂದಿಗೂ ಹಸಿರಾಗಿದೆ. ಅಪರಂಜಿ ಬಗ್ಗೆ ರಂಗನಾಥರಿಗೆ ತುಂಬು ಅಭಿಮಾನ. ಕೊರವಂಜಿ-ಅಪರಂಜಿ ಹುಟ್ಟುಹಾಕಿದ ಪರಂಪರೆ ನಾಡಿನ ಸಂಸ್ಕೃತಿಯ ವಿಕಾಸಕ್ಕೆ ಒಂದು ಅಗತ್ಯ ಕೊಡುಗೆ ಎಂದು ಅವರು ಪ್ರಾಮಾಣಿಕವಾಗಿ ನಂಬಿದ್ದರು. ತೊಂಭತ್ತನಾಲ್ಕರಲ್ಲಿ ಅಪರಂಜಿ ಯುಗಾದಿ ವಿಶೇಷಾಂಕವನ್ನು ಓದಿ ಮೆಚ್ಚಿ ಅದನ್ನು ಕುರಿತು ಅವರು ಬರೆದ ಲೇಖನ ಆ ವ್ಯಕ್ತಿಯ ಸಜ್ಜನಿಕೆಯನ್ನು ಸರಿಯಾಗಿ ಪ್ರತಿಬಿಂಬಿಸುತ್ತದೆ ಅನ್ನಿಸುತ್ತದೆ ನನಗೆ. ಹಾಗಾಗಿ ಅವರ ಆ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಪುನರ್ಮುದ್ರಿಸಿದ್ದೇನೆ.

ಜೀವನದ ಬಗ್ಗೆ ಅತ್ಯಂತ ಉತ್ಸಾಹ ತಳೆದಿದ್ದ ಈ ಅದಮ್ಯ ಚೈತನ್ಯದ ಮನುಷ್ಯನ ವಿವಿಧ ಆಸಕ್ತಿಗಳ ಪರಿಚಯ ಪಡೆಯಬೇಕಾದರೆ ಇವರು ಬರೆದಿರುವ ''ಪರದೇಶಿಯಾದಾಗ'' ಪುಸ್ತಕವನ್ನು ನೀವು ಓದಬೇಕು.

ಜೀವನದ ಸಾರ್ಥಕತೆ ಎಂದರೇನು? ಎಂಬ ಪ್ರಶ್ನೆ ನನ್ನನ್ನು ಆಗಾಗ್ಗೆ ಕಾಡುತ್ತಿರುತ್ತದೆ. ಆ ಸಂಜೆ ಶ್ರೀಮತಿ ಅಂಜನಾ ಮತ್ತು ಶ್ರೀಮತಿ ಅರುಣಾ ಇವರುಗಳು ಅತ್ಯಂತ ಪ್ರೀತಿಯಿಂದ ತಮ್ಮ ತಂದೆಯವರ ನೆನಪಿನಲ್ಲಿ ದೇವರ ನಾಮಗಳನ್ನು ಹಾಡಿದಾಗ ರಂಗನಾಥರದ್ದೊಂದು ಸಾರ್ಥಕ ಜೀವನ ಎಂಬ ನಿಶ್ಚಯ ಭಾವನೆ ತರ್ಕವಿತರ್ಕಗಳ ಗೋಜಲಿಲ್ಲದೆ ಮೂಡಿಬಂತು. ವಿಶ್ವಾಸದಿಂದ ಯೋಗಕ್ಷೇಮವನ್ನು ನೋಡಿಕೊಂಡ ರಂಗನಾಥಣ್ಣನಿಗೆ ಅಪರಂಜಿಯ ತುಂಬು ಹೃದಯದ ನಮನ.

- ಶಿವಕುಮಾರ್



ಬೇವು ಇಲ್ಲ - ಬರೀ ಬೆಲ್ಲ!

- ಡಾ|| ಎಚ್.ಕೆ. ರಂಗನಾಥ್

ಮೊನ್ನೆ ಯುಗಾದಿ ಸಂದರ್ಭದಲ್ಲಿ ಕೈಗೆ ಬಂದ ವಿಶೇಷ ಸಂಚಿಕೆಗಳಲ್ಲಿ ಮೂರು ವಿನೋದಕ್ಕೆ ಮೀಸಲು. ಸಪ್ಪೆ, ಒಗರು, ಕಹಿ, ಕಾರ, ಹುಳಿ ಮೊದಲಾದ ರುಚಿ ನಾಲಿಗೆಗೆ ತೀಡಿದ ಮೇಲೆಯೆ ಸಿಹಿಯ ಸವಿ ಎದ್ದೆದ್ದು ಪುಟಿಯುತ್ತದೆ. ಕೊರವಂಜಿಯ ಮುದ್ದು ಮಗಳಾದ ಅಪರಂಜಿಯೂ ತನ್ನ ಬುಟ್ಟಿಯಲ್ಲಿ ಆ ರುಚಿಗಳನ್ನೆಲ್ಲ ತಂದು ಬಡಿಸಿದಳು. ಆಕೆಯೊಡನೆ ಕುಳಿತರೆ ಉಳಿದ ಕೆಲಸವೆಲ್ಲ ಹಾಳು. ಸಾಕೆಂದು ಒಂದೇ ಒಂದು ನಿಮಿಷ ಬಿಟ್ಟು ಹೋದರೆ ಮತ್ತೆ ಅದೇ ಅದೇ ಸೆಳೆತಕ್ಕೆ ಸಿಕ್ಕಿ ಬಳಿಸಾರಿ ಆಕೆಯ ಬಂಧಿಯಾಗಬೇಕು! ಹೀಗೆ ಅದೆಷ್ಟು ಮಂದಿಯನ್ನು ಬರ ಸೆಳೆದು ಮೋಹಗೊಳಿಸಿದಳೋ ಆಕೆ - ಆಕೆಯಿಂದಾಗಿ ಈ ಸಲದ ಯುಗಾದಿ ವಿನೋದದ ಹಬ್ಬವಾಯಿತು.

ಇಂಥ ಸಿಂಗರಗೊಂಡ ಅಲಂಕಾರಿಕ ಭಾಷೆಯನ್ನು ಬದಿಗಿಟ್ಟು 'ಅಪರಂಜಿ'ಯನ್ನು ಮಾತನಾಡಿಸಿದರೆ, ಮಾತುಮಾತಿಗೆ ಮುತ್ತು ಸುರಿಸುತ್ತಾಳೆ.

ಬಜಾರಿ
ಕನ್ಯಾಕುಮಾರಿ
ಯ ಕೈಹಿಡಿದ ರಾಮಶೇಷ
ಸದಾ ಕರಿವದನ
ಕುರಿವದನ
ಬದುಕಿದ್ದು ಕೀರ್ತಿಶೇಷ!!

ಅತ್ಯಲ್ಪ ಅವಧಿಯಲ್ಲಿ ಮೊನಚು ಮಾತುಗಳ ಕತ್ತಿವರಸೆಯಿಂದಾಗಿ ಅಚ್ಚರಿಗೊಳಿಸುವಂಥ ಚಿತ್ರಗಳನ್ನು ರಚಿಸಿ ಜನಮನವನ್ನು ಗೆದ್ದ ದುಂಡಿರಾಜರ ಚುಟಕವಲ್ಲ ಇದು. ದಿನಕರ ದೇಸಾಯಿಯವರ ಚೌಪದಿಗಳ ಕಾರಣ, ಆ ಬಗೆಯ ಬೆಳೆಸು ಬಂದಂತೆ ನಾ.ಕ. ರಾ.ಶಿ. ಅವರ ಕಾರಣ ಅಣಕಾಡುಗಳ ಬೆಳೆಯಂತೆ, ಕೈಲಾಸಂ, ರಾಜರತ್ನಂ ಮೂಲಕ ದಲಿತ ಕಾವ್ಯದ ಕಾರಂಜಿಯಂತೆ, ದುಂಡಿರಾಜರ ಕಾರಣ ಹನಿಗವಿತೆಗಳ ಕಾರಂಜಿ ಈಗ ಪುಟಿಯುತ್ತಿದೆಯಷ್ಟೆ. ಆದರೂ ಅವರ ಹನಿಗವನವಲ್ಲ ಇದು. ''ವರ್ಷದ್ ವ್ಯಕ್ತಿ ಹರ್ಷದ್ ಮೆಹ್ತಾ'' ಎಂಬ ಸತ್ಯಗೀತೆ ರಚಿಸಿದ ಶಂಸರು ಸೃಷ್ಟಿಸಿದ ಪಾತ್ರ ಅದು. ಹನಿಗವನಗಳಿಗೆ ಹೆಸರಾದ ದುಂಡಿರಾಜ್ ಅವರೂ ಬರೆದಿದ್ದಾರೆ, ಇದರಲ್ಲಿ. ಒಂದು ನಾಟಕ, ಒಂದು ಪದ್ಯ - ''ಹಾಸ್ಯ ಎಷ್ಟು ಅವಶ್ಯ'' ಎಂಬ ಘನಘೋರ ಶೀರ್ಷಿಕೆಯಲ್ಲಿನ ಮೂರು ಪಾತ್ರಗಳ

ಪುಟ್ಟ ನಾಟಕ ಅವರದು. ಹೀಗೆಯೇ ಪ್ರಾರಂಭಿಸಿದ ಅನೇಕರು ಪಳಗುತ್ತ ಪಳಗುತ್ತ ಒಳ್ಳೆಯ ನಾಟಕಕಾರರೇ ಆದದ್ದುಂಟು ಸುಳ್ಳಲ್ಲ. 'ಸಮಾಧಾನ' ಎಂಬ ಅವರ ಎರಡು ಪುಟಗಳ ಕವಿತೆಯಲ್ಲಿನ ಮೊನಚು ಕಡೆಯ ನುಡಿಯಲ್ಲಿದೆ.

ಮಹಾಕವಿಗಳಲ್ಲೊಬ್ಬರು
ಸಂದರ್ಶನದಲ್ಲಿ ಹೇಳಿದ್ದಾರೆ
ಇದ್ದಕ್ಕಿದ್ದಂತೆ
ಧುಮ್ಮಿಕ್ಕಿ ಹರಿವುದಂತೆ

ಅವರ ಕಾವ್ಯಧಾರೆ
ಒಂದು ವಾರ ಕೂತು
ಸರಸರಬರೆದರಂತೆ
ಭರ್ತಿ ಐವತ್ತು ಕವಿತೆ

ಭಲೆ ಭಲೆ
ಮಹಾ ಕವಿಗಳೆ
ಬೊಕ್ಕ ತಲೆಯಲ್ಲೂ
ಎಂಥ ಬಂಪರ್ ಬೆಳೆ!

....
...
ನೋಡೇ ಬಿಡೋಣ
ಎಂದು ಅವರ ಸಂಕಲನ
ತಂದು ಓದಿದೆ ನಿಧಾನ

ಅಂಥ ಒಂದೇ ಒಂದು ಕವನ
ನಾನು ಬರೆಯಲಿಲ್ಲ
ಕೊನೆಗೂ ಬರೆಯಲಿಲ್ಲ
ಸಧ್ಯ ಬರೆಯಲಿಲ್ಲ!
ಅದೇ ಸಮಾಧಾನ

ಹೀಗೆ 160 ಪುಟಗಳಲ್ಲಿ ನಗೆ ಚಿಮ್ಮಿಸುತ್ತ ಹಿಡಿತಕ್ಕೆ ಸಿಕ್ಕುವಂತೆ ಮೈಕೈ ತುಂಬಿಕೊಂಡ ಅಪರಂಜಿಯನ್ನು 28 ಪುಟಗಳ ಜಾಹೀರಾತು ಹದವಾಗಿ ಹೊಂದಿಕೊಂಡಿದೆ. ಹದಿನಾರು ವ್ಯಂಗ್ಯಚಿತ್ರಗಳಲ್ಲಿ ಮೂರು, ಕೊರವಂಜಿ

ಹುಟ್ಟಿದಾಗ ಅದನ್ನು ಆರ್.ಕೆ. ಲಕ್ಷ್ಮಣ್ ಸಿಂಗರಿಸಿದ ಮೂಲ ಚಿತ್ರಗಳು ಅಂದಿಗೂ ಇಂದಿಗೂ ಸಂಗತ. ಸೊಗಸಾದ ಬಿಳಿ ಕಾಗದ, ಚೆಲುವಾದ ಇಂಪ್ರೆಷನ್ ಮುದ್ರಣ. ಇಪ್ಪತ್ತೆಂಟು ನಗೆ ಲೇಖನಗಳು. ಮುಖಪುಟದಲ್ಲಿ ವೈಯ್ಯಾರ ಮಾಡುತ್ತಾ ನಿಂತ ಅಪರಂಜಿ ಮೋಹ ಹಿಡಿಸುವಂಥವಳು.

ಕೇಫರ ರೆಸೀರ್‍ಯೆಟಿಂಗ್, ಎಂದಿನಂತೆ ಕನ್ನಡ - ಇಂಗ್ಲೀಷ್ ಮಾತುಗಳನ್ನು ದುಡಿಸಿ ಸರ್ಕಸ್ ಮಾಡಿಸಿ, ಹೆಸರಾಂತ ಮೈಗಳ್ಳರ ಸಂಘದ ಕೇಂದ್ರ ಸಂಪುಟದ ವಾಗ್ವಿವಾದದಲ್ಲಿ ಪಾನಪಾತ್ರೆಯ ಮಹತಿಯನ್ನು ರಂಜಕವಾಗಿ ಚಿತ್ರಿಸಿದೆ. 'ಏನೆಂಥ ದೈಹಿಕ ರೋಗಗಳನ್ನು ಹಿಂದು ಮುಂದಾಗಿಸಿ, ಇಲ್ಲದವರಿಗೆ ಕೊಟ್ಟು ಇದ್ದವರಿಗೆ ಬಿಟ್ಟುಕೊಟ್ಟು, ತೆಳುವರನ್ನು ತೋರವಾಗಿಸಿ, ಧಡಿಯರ ಮೈಭಾರ ಇಳಿಸಿ, ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಫಿಸಿಯೋ ಥೆರಪಿ ಮಾಡಿ ಪ್ಯಾಸೆಂಜರುಗಳನ್ನು ಪಳಗಿಸುತ್ತಿರುವ ಬೆಂಗಳೂರಿನ ಕೆಂಪು ಬಸ್ಸುಗಳ ಮಹತಿ ಎಸ್.ಎನ್. ಶಿವಸ್ವಾಮಿಯವರ ಹರಟೆಯಲ್ಲಿದೆ. ಅವರ ಘ್ರಾಣೇಂದ್ರಿಯ ಅಚ್ಚಿನಲ್ಲಿ 'ಪ್ರಾಣೇಂದ್ರಿಯ'ವಾಗಿ ಕನ್ನಡಕ್ಕೆ ಹೊಸತೊಂದು ಮಾತನ್ನು ಸೇರಿಸಿದೆ.

ವಿನೋದ ಸಂಪುಟದಲ್ಲಿನ ಐವರು ಮಹಿಳೆಯರಿಗೆ, ಅವರ ಬರೆಹದ ನಿಟ್ಟಿನಿಂದ ಮೂರು ಕ್ಯಾಬಿನೆಟ್ ಸ್ಥಾನಗಳೂ ಎರಡು ಮಿನಿಸ್ಟರ್ ಆಫ್ ಸ್ಟೇಟ್ ಸ್ಥಾನಗಳೂ ದೊರೆತಿವೆ. ಅರುಣಾ ಆರ್. ಕಾರಂತ ಹಾಗೂ ಪ್ರಭಾ ಮಹಿಳಾ ಲೇಖಕಿಯರೇ ಆಗಿದ್ದರೆ, ವಿನೋದ ಸಾಹಿತ್ಯ ಮಂಡಲದಲ್ಲಿ ಅವರಿಗೆ ಮತ್ತೆರಡು ಸ್ಥಾನಗಳು ಮೀಸಲಾಗುತ್ತದೆ. 'ರಕ್ತಪಾತ' ಎನ್ನುವಂಥ ರುದ್ರ ಶೀರ್ಷಿಕೆಯಲ್ಲಿ, ಮದುವೆ ದಿಬ್ಬಣದ ಬಸ್ಸನ್ನು ಅಟ್ಟಿಸಿಬಂದು ತರುಬಿ ಹಿಡಿದ ಪೋಲೀಸ್ ಅಧಿಕಾರಿ. ಜೀಪಿನಿಂದ ಇಳಿದು, ದಿಗ್ಭ್ರಮೆಗೊಂಡು ಎಲ್ಲರೂ ನೋಡುತ್ತಿರುವಾಗ, ಅನಂತ ಮಾವಯ್ಯನ ಹೆಗಲ ಮೇಲೆ ಕೈ ಹಾಕಿ - ''ಅಲ್ವೋ ಚನ್ನರಾಯಪಟ್ಟಣದಿಂದ ಫಾಲೋ ಮಾಡ್ಕೊಂಡು ಬಂದೆ. (ನಿನ್ನ) ಮಗನ ಮದುವೇಗೆ ಬರೋಕಾಗುಲ್ಲ. ಸ್ಪೆಷಲ್ ಡ್ಯೂಟಿ ಮಹಾಮಸ್ತಕಾಭಿಷೇಕ - ರಜಾ ಸಿಗಲ್ಲ ಕಣೋ - ಇಲ್ಲೇ ಎಲ್ಲರನ್ನೂ ಮೀಟ್ ಮಾಡೋಣ ಅಂತ ಹಿಂದೇನೆ ಬಂದೆ'' ಎಂದಾಗ ಎಲ್ಲರದೂ ಎಂಥ ನಿಟ್ಟುಸಿರು! ಕಮಲಾರಾಮಸ್ವಾಮಿಯವರ ಕತೆ ಇದು. ಮದರಾಸೀ ಜಲಜಾಕ್ಷಿಯನ್ನು ಮದುವೆಯಾದ ಜಲಂಧರೆ ಜಸವಂತಸಿಂಗ್ ಆಕೆಯನ್ನು ಪಾಕ ಶಾಸ್ತ್ರದಲ್ಲಿ ಪಳಗಿಸಿದ ಸಂಗತಿಯನ್ನು ನಂದಿನಿ ಕಾಪಡಿ ತಿಳಿಸಿದ್ದಾರೆ. ಮಗಳ ಗುರುತೇ ಸಿಗದಾದ ಮರೆಗುಳಿ ಪ್ರೊಫೆಸರರ ದೃಷ್ಟಾಂತಕ್ಕೆ ಸೊಗಸಾದ ಮಸಾಲೆ ಬೆರೆಸಿ ಬಡಿಸಿದ್ದಾರೆ ಟಿ.ಎಸ್. ಅಂಬುಜ. ಭುವನೇಶ್ವರಿ ಹೆಗಡೆಯವರು ಭಾಷಣ ಮಾಡುವವರ ಬವಣೆಯನ್ನು ಬಣ್ಣಿಸಿದ್ದಾರೆ. ಈ ಲೇಖನದ ಒಂದೊಂದು ಪ್ರತಿಯನ್ನು ಕನ್ನಡ ನಾಡಿನ ಎಲ್ಲ ಸಂಘ ಸಂಸ್ಥೆಗಳಿಗೆ ಕಳುಹಿಸಿ ಕಡ್ಡಾಯವಾಗಿ ಓದಿಸಿದರೆ ಮುಂದಿನ ಭಾಷಣಕಾರರಿಗೆ ಮಾತ್ರವಲ್ಲದೆ ಪ್ರೇಕ್ಷಕ ಶ್ರೋತೃಗಳಿಗು ಮಹದುಪಕಾರವಾಗುತ್ತದೆ.

ಮಂತ್ರಿಗಳು ಮಂತ್ರಿಗಳಂತೆ ಮೊಗುಂ ಆಗಿ ಇರದೆ, ಜನಸೇವೆ ಮಾಡ್ತೀನಿ. ಅವರ ಜೊತೆ ಕೆಂಪು ಬಸ್ಸು ಹತ್ತುತ್ತೀನಿ, ಆಟೋಲಿ ಓಡಾಡುತೀನಿ, ರೈಲ್ವೆ ಸೆಕೆಂಡಿನಲ್ಲಿ ತಿರುಗಾಡುತೀನಿ. ಸೀಮೆಎಣ್ಣೆ ಕ್ಯೂನಲ್ಲಿ ನಿಲ್ಲುತ್ತೀನಿ ಅಂತ ಹೊರಟರೆ ಆಗಬಹುದಾದ ಆಘಾತಗಳನ್ನು ಕಂಭಂ ಕೃಷ್ಣಮೂರ್ತಿ ವಿವರಿಸಿದ್ದಾರೆ. ಇದನ್ನು ನಿಚ್ಚಳವಾಗಿ ತಿಳಿದದ್ದರಿಂದಲೇ ಜನತಾ ಪ್ರತಿನಿಧಿಗಳಾದ ನಮ್ಮ ಮಂತ್ರಿಗಳು ಸಾಮಾನ್ಯ ಜನದಿಂದ ಸಿಡಿದು ದೂರ ನಿಂತು, ಸರಕಾರದ ಪ್ರತಿನಿಧಿಗಳಾಗಿ ವಿಜೃಂಭಿಸುತ್ತಿರುವುದು: ವಿದೇಶಿ ಸಗಣಿಯನ್ನು ಯುರೋಪಿನಿಂದ ಆಮದು ಮಾಡಿಕೊಳ್ಳುವ ನಮ್ಮ ಸರಕಾರದ ನಿಶ್ಚಿತ ಧೋರಣೆಯನ್ನು ಕುರಿತು ಭಯಂಕರ ನ್ಯಾಷನಲಿಸ್ಟ ಗುಡಾಗುಡಿಯವರು ಘುಡುಘುಡಿಸಿದ್ದು ನ್ಯಾಯವೆನಿಸುತ್ತದೆ.

''ಯಾಕ್ರೀ ನಮ್ಮಲ್ಲಿ ಏನು ಕೊರತಿ ಐತಿ? ಆಕಳಾ ಇಲ್ಲವಾ? ಎಮ್ಮೀ ಇಲ್ಲವಾ? ಅವೇನು ಮೇದು ಹೊಟ್ಟೆ ಕಟ್ಟಿಕೊಂಡು ಕುಂತಾವೇನು? ಅವೂ ಶೆಗಣಿ ಹಾಕೇ ಹಾಕ್ತಾವು! ನಾವೂ ನಮ್ಮ ದೇಶದ ಶೆಗಣೀನ ಬೇರೆ ದೇಶದಾಗ ಪ್ರಚಾರ ಮಾಡಬೇಕು ಆಗಲೇ ನಮ್ಮ ಪರಂಪರೆ, ಸಂಸ್ಕೃತಿ ಮತ್ತು ನಮ್ಮ ಮಹತ್ವದ ಪರಿಮಳ ಬೇರೆ ದೇಶಗಳ ಒಳಗೆ ಹರಡೋದರಲ್ಲಿ ಸಂಶೆ ಇಲ್ಲ ''ಗುಡಗುಡಿಯವರನ್ನು ಸಂದರ್ಶಿಸಿದ ಪೀಪಿಯವರನ್ನು ಮ್ಯಾಗಸೇಸೆ ಪ್ರಶಸ್ತಿಯ ಶೋಧನ ಸಮಿತಿಯವರು ಕಡೆಗಣಿಸಿದ್ದು ಮಹಾಪರಾಧವಾಗಿದೆ. ಹಳೆ ವಸ್ತಾದಿ ಅರಾಸೇ ಅವರ ಹನುಮಣ್ಣನಿಗೆ ಗುರುಕೃಪೆಯಾದ ಪ್ರಸಂಗದ ಲೇಖನ, ಸತ್ಯಕಥೆಯೇ ಸರಿ ಎಂದು ನಂಬಿಸುವಷ್ಟು ಶಕ್ತವಾಗಿ ಗುರುವಿಗೆ ಹನುಮಣ್ಣನ ಕೃಪೆ ಮಾಡಿಸುತ್ತದೆ. ವಾಚಕನನ್ನು ಅಭೇದವಾದ ಬ್ರಹ್ಮಜ್ಞಾನದತ್ತ ಸೆಳೆದೊಯ್ದು ಮೃತ್ಯುದರ್ಶನ ಮಾಡಿಸುತ್ತದೆ. ಓ ಹೆನ್ರಿಯ ಛಾಪು ಹೊಡೆಸುವ ಮನೋಹರ ಚಂದ್ರನ್: ಆಂಡಮಾನ್ ಶಿಕ್ಷೆಯನ್ನು ಅನುಭವಿಸಬೇಕಾಗಿದ್ದವನ ಡಬಲ್ ಬಡ್ತಿ ಗಿಟ್ಟಿಸಿದ ಮಯಾಮಂತ್ರದ ಗುಟ್ಟನ್ನು ಒಡೆದು ಹೇಳಿದ್ದಾರೆ. ಎಂದಿನಂತೆ ಮನೋಹರವಾದ ಲೇಖನ. ಹಾಗೆ ನೋಡಿದರೆ ಮದುವೆ ಮಾಡುವುದು ಸುಲಭ. ಮನೆಕಟ್ಟುವುದು ಸುಲಭ ನಿಜವಾಗಿ ಕಷ್ಟದ ಕಾಯಕವೆಂದರೆ ಮನೆ ಬದಲಾಯಿಸುವ ಬವಣೆ ಎಂದು ಕೃಷ್ಣ ಸುಬ್ಬರಾವ್ ನಂಬಿಸುತ್ತಾರೆ. ಸೂರಿ ಹಾರ್ದಳ್ಳಿಯವರು ಎಲ್ಲರಿಗೂ ತಿಳಿದ ಹಳೆಯ ಕಂಬದ ಆಧಾರದ ಮೇಲೆ ತಮ್ಮದೇ ಹೊಸ ಹಂದರ ಕಟ್ಟಿದ್ದಾರೆ. ಸೀ.ಆರ್. ಸತ್ಯ ಹೊಸವರುಷದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ, ಕಾಫೀಪ್ರಿಯರಿಗೆ ಆಟೋರಿಕ್ಷಾವಗೈರೆಯವರಿಗೆ ಅನೇಕ ಸೂಚನೆಗಳನ್ನಿತ್ತು ಕಡೆಯಲ್ಲಿ ''ಅಪರಂಜಿ'' ಸಂಪಾದಕರಿಗೆ ಉಪಯುಕ್ತ ಸಲಹೆ ಎನ್ನುವುದಕ್ಕಿಂತ ಉಪಯುಕ್ತ ಎಚ್ಚರಿಕೆ ಕೊಟ್ಟಿದ್ದಾರೆ ವಯಸ್ಸು ಹನ್ನೊಂದಾಗಿ ''ಅಪರಂಜಿ'' ಈಗ ದಾವಣಿ ಲಂಗದಿಂದ ಸೀರೆ ಉಡೋ ಹಂತಕ್ಕೆ ಇಳಿದಿದ್ದಾಳೆ (?) ನಿಮಗೆ ಹಾಗೂ

ನಮ್ಮಗೆಲ್ಲರಿಗೂ ಕೈಕೊಟ್ಟು ಎಲ್ಲಾದರೂ ನುಣುಚಿಕೊಂಡು "ಓಡಿ ಹೋಗಿ ತಲೆಮರೆಸಿಕೊಂಡಾಳು - ಜೋಕೆ" ಸಂಪಾದಕರು ಈ ಎಚ್ಚರಿಕೆಯನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸಬೇಕೆಂದು ಧ್ವನಿಗೂಡಿಸಬೇಕಾಗಿದೆ.

ಹದವಾದ ಹರಟೆ ಹೊಡೆಯುತ್ತ ನಮ್ಮ ಏರು ಪೇರು ತಿದ್ದುವಲ್ಲಿ ವಿಜಯಾ ಸಚ್ಚಿದಾನಂದ, "ಧಾರವಾಡದಾಗ ಎಲ್ಲಿ ನಿಂತು ಕಲ್ಲು ಒಗೆದರೂ ಒಬ್ಬ ಕವೀ ತಲೇಗೆ ಬಡಿತೈತಂತ" ಎಂದು ನಂಬಿಸಿ, 'ಚಂಪಾ'ನ ವಿಶ್ಲೇಷಿಸಿ 'ಪಾಪು'ಗೆ ಲಾಲಿ ಹಾಡಿ ಚೀಪ್ ಗೆಸ್ಸಾನ್ವೇಷಣೆಯಲ್ಲಿ ತೊಡಗಿದ ಎಮ್ಮೆ ಕರುಗಳ ಗೋಳನ್ನು ಪದರಪದರವಾಗಿ ಬಿಡಿಸಿ ಕಡಗೆ ಹಳ್ಳಕ್ಕೇ ನುಗ್ಗಿಸಿದ ಬಸವರಾಜ ಸಾದರ, ರಜಾಸುದಿನಗಳನ್ನು ಮೆಲುಕಿಸಿದ ಬಾಗೂರು ಚಂದ್ರು. "ಥೂಕಾರ"ಕ್ಕೆ ಪಟ್ಟ ಕಟ್ಟಿದ ಎಂ.ಎಸ್ಕೆ. ಜುಬ್ಬಾದಲ್ಲಿನ ವೆರೈಟಿ ಮತ್ತು ವೈಶಿಷ್ಟಗಳನ್ನು ಕೆದಕಿ ತೋರಿದ ಪ್ರಭಾ, ಚತುರ್ವಿದ ಪರೀಕ್ಷೆಗಳನ್ನು ಪರೀಕ್ಷಿಸಿದ ಚಿಂತಾಮಣಿ ಕೊಡ್ಲೆಕೆರೆ, ಕನ್ನಡವ್ಯಾಕ-ರಣದಲ್ಲಿ ಕತ್ತೀವರಸೆಯಾಡಿದ ಪ್ರಕಾಶ, ಹೀಗೆ ಬರೆದವರೆಲ್ಲ ಒಂದಲ್ಲ ಒಂದು ರೀತಿ ಅಪರಂಜಿಯನ್ನು ಅಲಂಕರಿಸಿದ್ದಾರೆ.

ನನ್ನ ಕುತೂಹಲವನ್ನು ಕೆರಳಿಸಿ ಮನಸುಸ ತುಂಬಿ ಹೋಗುವಂತೆ ಸಂತೋಷ ಸುರಿದ ಮತ್ತೆರಡು ಲೇಖನಗಳೆಂದರೆ ಶಿವು, ಶೀನೂ ಇವರುಗಳು ರಚಿಸಿದವು. ಮಧುರಾಷ್ಟಕಾನ ತನಗೆ ಬೇಕಾದ ಹಾಗೆ ಪೋಲಿ ಪೋಲಿಯಾಗಿ ತಿರುಗಿಸ್ಕೊಂಡು ಗೋಗರೆಯುತ್ತ ತನ್ನ ಸ್ವಂತ ಮನೇನ ಸೆಲ್ಫ್ ಆಕ್ಯುಪೇಷನ್‌ಗೆ ಜೇಡಿ ಪಡೆದ ದೆವ್ವಾನ ಲೇಖಕರು ಹೀನಾ ಮಾನಾ ಎಳೆದಾಡಿ ಅದರ ನಾಚಿಕೆ ಕಳೆದು ಲೇವಡಿ ಮಾಡಿದ ಶಿವುನ ಅಂಥ ದೆವ್ವಗಳು ಕಾಡದೆ ಬಿಟ್ಟಿರುವುದು ಆಶ್ಚರ್ಯ. ಇನ್ನು ಶೀನೂ - "ಬದುಕಲು ಕಲಿಯಿರಿ" ಎಂಬ ಎರಡು ತಲೆಬರಹದ ಅಡಿ ಅದೆಷ್ಟು ರಸವತ್ತಾದ ಚಿತ್ರ ಬಿಡಿಸಿದಾರೆ ಎಂದರೆ ನಾನು ಓದಿ, ಮತ್ತೆ ಓದಿ. ಹೆಂಡತಿಗೆ ಓದಿ. ಪಕ್ಕದ ಮನೆಯ ಮುದುಕರಿಗೆ ಓದಿ, ಎದುರು ಮನೆಯ ಮಕ್ಕಳಿಗೆ ಓದಿ ಹೇಳಿ ವಾರದ ತುಂಬ ಶಿವಣ್ಣ ಮಾಸ್ತರ ಚಿತ್ರವನ್ನು ಮನಸ್ಸಿನ ತುಂಬ ತುಂಬಿಕೊಂಡು, ಆ ಗುಂಗಿನ ಸುಖದಲ್ಲೇ ಮುಳುಗಿರಬೇಕೆನ್ನಿಸುತ್ತದೆ.

ಇಷ್ಟೇ ಹೇಳಬೇಕು. ಆಡುತ್ತ ಆಡುತ್ತ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಕಣ್ಣ ಮುಂದೆಯೇ ಬೆಳೆಯುತ್ತ ಬೆಳೆಯುತ್ತ ಇಂದು ಚಲುವಿಕೆಯ ಚೈತನ್ಯದಿಂದ ಮೈದುಂಬಿ ಬಂದ ಅಪರಂಜಿಯನ್ನು ತಾಯಿ ಕೊರವಂಜಿಯೂ ಅಜ್ಜ ರಾಶಿಯವರೂ ಬರಸೆಳೆದು ಅಪ್ಪಿ ಮುದ್ದಾಡುವರೆಂಬಲ್ಲಿ ಏನೂ ಸಂಶಯ ಕಾಣದು; ಅಪರಂಜಿ; ಕೊರವಂಜಿಯ ಸಾರ್ಥಕ ಸಂತತಿ. ಶಿವು, ರಾಶಿಗೆ ಹೇಗೊ ಹಾಗೆ!

★★★

ಮುದವ ನೀಡಿಹೆ ನೀನು

– ಭಕ್ತ

ಇತ್ತೀಚೆಗೆ ಚೈನಾದಲ್ಲಿ ಒಂದು ಹೊಸ ಹೇಳಿಕೆ ಪ್ರಚಲಿತವಾಗಿದೆ. ಜನಗಳು ತಮ್ಮ ಮೋಜಿಗಾಗಿ ಹೆಚ್ಚು ಹೆಚ್ಚು ಖರ್ಚುಮಾಡಿ ಗೃಹಬಳಕೆ ಹಾಗೂ ಲಕ್ಷುರಿ ಸಾಮಗ್ರಿಗಳ ಮಾರಾಟವನ್ನು ಹೆಚ್ಚಿಸಬೇಕಂತೆ. ಇದರಿಂದ ಸಂಬಂಧಿಸಿದ ಕೈಗಾರಿಕೆಗಳು ಚೇತರಿಸಿಕೊಳ್ಳಬಹುದಂತೆ. ಸಹಜವಾಗಿಯೇ ಇದನ್ನು ಚೈನಾ ಸಮಾಜದ ಬಿಡುಗಡೆಯ ಸಂಕೇತ ಎಂದು ಅನೇಕರು ಹಾಡಿ ಹೊಗಳಿದ್ದಾರೆ.

ಮೋಜಿನ ವಿಷಯ ಮಾತನಾಡುವಾಗ, ಒಬ್ಬರಿಗೆ ಸಂತಸ ತರುವ ಸಂಗತಿ ಇನ್ನೊಬ್ಬರಿಗೆ ಸಂತಸದಾಯಕವಾಗಿ ಇಲ್ಲದಿರೋ ಸಾಧ್ಯತೇನ ಮರೆಯಬಾರದು... ಒಬ್ಬರ ಅಮೃತ ಇನ್ನೊಬ್ಬರ ವಿಷ ಅಂತಾರಲ್ಲಾ ಹಾಗೆ. ಸಾಮಗ್ರಿಗಳ ಮಾರಾಟಕ್ಕೂ, ವ್ಯಕ್ತಿಗತವಾದ ಮೋಜಿನ ಅನುಭವಕ್ಕೂ ತಾಳೆ ಹಾಕುವುದನ್ನು ನೋಡಿದರೆ ಟೀವಿಯೇ ದೇವರು ಎಂದು ನಂಬಿರುವ ನಮ್ಮ ಮಿತ್ರರಾದ ಅಮೆರಿಕನ್ನರ ನೆನಪಾಗುತ್ತದೆ. ಅಮೆರಿಕನ್ನರು ಗೊತ್ತಲ್ಲ, ತಂದೆ ಮಾಡಿದ ಅನಾಹುತಗಳು ಸಾಲದು ಅಂತ ಅವನಂತೇ ಕಾಣುವ ಮಗನಿಗೆ ಅಧ್ಯಕ್ಷ ಪಟ್ಟ ಕಟ್ಟಿ ಕೂರಿಸಿರೋ ಜನ. ಅದೂ ಯಾವ ಕಾರಣಕ್ಕೇ ಅಂತೀರೀ. ದೇಶದ ಅರ್ಥವ್ಯವಸ್ಥೇನ ಒಬ್ಬ ಸ್ಟುರದ್ರೂಪಿ ಕಚ್ಚೆಹರುಕ ಚೆನ್ನಾಗಿ ನಡೆಸ್ಬಿಟ್ಟಾ ಅನ್ನೋ ಕೋಪದಲ್ಲಿ. ಎಂಥ ಹುಚ್ಚು ಅಂತೀನಿ.

ತನ್ನ ಜೀವನ ಶೈಲಿಗೆ ಬೇರೆ ಸಾಟೀನೇ ಇಲ್ಲಾ ಅಂತ ನಂಬಿರೋ ಅಮೆರಿಕನ್ನನಿಗೆ, ಹೊರವಾಗಿ ಬೆಳೀತಿರೋ ಹಸಿರು ಡಾಲರಿನ ನೆರಳಿನಲ್ಲಿ, ಅಸಂಖ್ಯಾತ ಸುಖಸಾಧನಗಳ ಮಧ್ಯೆ ಇದ್ದು ಅಭ್ಯಾಸ. ಒಡೆಯನಿಗೆ ಬೇಕಾದುದನ್ನೆಲ್ಲವನ್ನೂ ತಾನಾಗಿಯೇ ಮಾಡಿಬಿಡುವ ಕಾರು, ಗರಾಜಿನ ಬಾಗಿಲು ತೆರೆಯಲು ಎಲೆಕ್ಟ್ರಾನಿಕ್ ಕಿರಣ ಇವೆಲ್ಲಾ ಅಮೆರಿಕದ ಶ್ರೀ ಸಾಮಾನ್ಯನ ಸೇವೆಗೆ ಸದಾ ಸಿದ್ಧ. ತೊಂಭತ್ತಾರು ಛಾನೆಲ್‌ಗಳಲ್ಲಿ ಸತತವಾಗಿ ಬಿತ್ತರವಾಗುತ್ತಿರುವ ಟಿವಿ, ಅವನಿಗೆ ಹೊಸ ಮಾಹಿತಿ ಕೊಡುವುದರೊಂದಿಗೆ, ಬುದ್ಧಿ ಹೇಳುವ ಕೆಲಸವನ್ನೂ ವಹಿಸಿಕೊಂಡು ಕೊನೆಗೆ ಟಿವಿ ಇಲ್ಲದ ಜೀವನ ದುಸ್ಸಾಧ್ಯವೆನ್ನುವಂತೆ ಮರಳು ಹಿಡಿಸಿಬಿಡುತ್ತದೆ. ಫ್ರಿಜ್‌ನಿಂದ ಕ್ರಷ್ಡ್ ಐಸ್, ತಾನೇ ತೆರೆದು ಮುಚ್ಚಿಕೊಳ್ಳುವ ಕಿಟಕಿಗಳು, ಬೇಕಾದಂತೆ ಸರಿಯುವ ಕಿಟಕಿ ತೆರೆಗಳು ಇವೆಲ್ಲಾ ಬೆರಳಿನ ತುದಿಯ ಗುಂಡಿ ಒತ್ತಿ ನಡೆದುಹೋಗುತ್ತವೆ.

ಇನ್ನು ಮನೆಯಲ್ಲಿರುವ ಕಂಪ್ಯೂಟರ್, ಕಾಫಿ ಬಿಸಿಮಾಡುವುದಷ್ಟೇ ಅಲ್ಲದೆ, ಸುಮಧುರ ಸಂಗೀತದಿಂದ ಒಡೆಯನನ್ನು ಬೆಳಗಿನ ಜಾವ ಎಬ್ಬಿಸಿ, ಹವಾಮಾನದ ಬಗ್ಗೆ ಮಾಹಿತಿ ನೀಡಿ, ಬೇಕಾದವರಿಗೆ ಫೋನಿನ ಮೂಲಕ ಮೆಸೇಜುಗಳನ್ನು ತಾನೇ ರವಾನಿಸಿಬಿಡುತ್ತದೆ. ಮೈ ಕೈ ಮಸಾಜು ಮಾಡಲು ಇಲೆಕ್ಟ್ರಾನಿಕ್ ಮಸಾಜರುಗಳು, ಹಸಿವಿನಿಂದ ಎಂದೂ ನರಳದಂತೆ ನೋಡಿಕೊಳ್ಳಲು ಫ್ರಿಜ್ಜಿನ ತಂಬಾ ಫ್ರೋಜನ್ ತಿನಿಸುಗಳು ಇವೆಲ್ಲಾ ಸರ್ವೇ ಸಾಮಾನ್ಯ ಅಲ್ಲಿ. ಯಾವತ್ತು ಏನು ತಿನ್ನಬೇಕೆಂಬುದನ್ನೂ ಸಹಾ ಕಂಪ್ಯೂಟರೇ ನಿರ್ಧರಿಸಿ, ಸಮಯಕ್ಕೆ ಸರಿಯಾಗಿ ಆ ಫ್ರೋಸನ್ ತಟ್ಟೆ ಮೈಕ್ರೋವೇವ್‌ನಲ್ಲಿ ಬಿದ್ದು ಹದವಾಗಿ ಬಿಸಿಯಾದ ತಕ್ಷಣ ಹೊರಕ್ಕೆ ಬಂದುಬಿಡುತ್ತದೆ. ಎಂಜಲು ತಟ್ಟೆ ತೊಳೆಯಲು ಆಟೊಮ್ಯಾಟಿಕ್ ಡಿಷ್ ವಾಷರ್‌ಗಳು ಒಣಗಿಸಲು ಡ್ರೈಯರ್‌ಗಳು, ಇವೆಲ್ಲಾ ಬೇಜಾರಾದರೆ ಬಳಸಿ ಎಸೆಯುವ ಡಿಸ್ಪೋಸಬಲ್‌ಗಳೂ ದೊರೆಯುವ ದೇಶ ಅದು.

ಈ ರೀತಿ ಯಾಂತ್ರಿಕ ಜೀತದಾಳುಗಳೊಡನೆ ತೀರ ಹತ್ತಿರದ ಒಡನಾಟದಲ್ಲಿ ಜೀವಿಸುತ್ತಿರುವಾಗ ಸಾವೇನಾದರೂ ಸಂಭವಿಸಿದರೆ, ದಿನಗಳಗಟ್ಟಲೆ ಯಾರೂ ಅದನ್ನು ಗಮನಿಸದಿರಬಹುದು. ಏಕೆಂದರೆ ಯಾರಿಗೂ ಬೇರೆ ಯಾರ ಅಗತ್ಯವೂ ಇಲ್ಲದ ವಿಲಕ್ಷಣ ಜಗತ್ತು ಇದು. ಇಷ್ಟರಲ್ಲೇ ಉಸಿರಾಟ ನಿಂತ ತಕ್ಷಣ ಕಳೇಬರಕ್ಕೆ ತಕ್ಕ ಚಿಕಿತ್ಸೆ ನಡೆಸಿ ಅದನ್ನು ಸೂಕ್ತವಾದ ಕಾಫಿನ್ ಒಂದರಲ್ಲಿ ಇಟ್ಟು, ಸ್ವಂತದ್ದೇ ಆಗ ಒಂದು ಚಿತಾಗಾರದಲ್ಲಿ ಅದನ್ನು ಮೆಲ್ಲನೆ ಇರಿಸುವ ಕಂಪ್ಯೂಟರ್ ಪ್ರೋಗ್ರಾಂ ನಿರ್ಮಿತವಾದರೆ ಆಶ್ಚರ್ಯವೇನಿಲ್ಲ ಬಿಡಿ. ಗಂಭೀರವಾದ ಫ್ಯೂನ್ಲ್ ಹಾಡೊಂದನ್ನು ಆಟೋ ಪ್ರೋಗ್ರಾಮೊಂದು ನುಡಿಸುತ್ತಿರುವಂತೆಯೇ ಚಿತಾಗಾರದಿಂದ ಹೊರಬಂದ ಭಸ್ಮವನ್ನು ಒಂದು ಅಲಂಕೃತ ಭರಣಿಯಲ್ಲಿ ಇರಿಸಿ ಷೆಲ್ಫಿನ ಮೇಲೆ ಇಟ್ಟು ಗ್ರಾಹಕನಿಗೆ ತೃಪ್ತಿ ಒದಗಿಸುವ ವ್ಯವಸ್ಥೆ ಭವಿಷ್ಯದಲ್ಲಿ ಇಲ್ಲಿ ದೊರಕುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ರಾಷ್ಟ್ರ ಮಟ್ಟದಲ್ಲಿ ನೋಡಿದರೆ ಅರ್ಧಕ್ಕರ್ಧ ಕೈಗಾರಿಕೆಗಳು ಮಾರಕ ಅಸ್ತ್ರಗಳ ತಯಾರಿಕೆಯಲ್ಲಿ ತೊಡಗಿರುವುದಕ್ಕೆ ಕಾರಣ ಕೇಳಿದರೆ ಅಮೆರಿಕೆಯ ಜೀವನ ಶೈಲಿಯ ರಕ್ಷಣೆ ಎಂಬ ಉತ್ತರ ಬರುತ್ತದೆ. ಈ ಅಸ್ತ್ರಗಳಿಗೆ ಅಮೆರಿಕವನ್ನಷ್ಟೇ ಅಲ್ಲ, ಇಡೀ ಜಗತ್ತನ್ನು ಅನೇಕ ಬಾರಿ ನಾಶಮಾಡುವ ಶಕ್ತಿ ಇದೆಯಂತೆ. ಇಷ್ಟೇ ಅಲ್ಲ, ಇನ್ನೂ ನೀವು ನೋಡಬೇಕಾದ್ದು ಬೇಕಾದಷ್ಟಿದೆ ಎನ್ನುತ್ತಾರೆ ಬುಷ್.

ಇದನ್ನೆಲ್ಲಾ ನೋಡಿದಾಗ ಚೀನಾದ ಈ ಹೊಸ ನೀತಿಯನ್ನು ನಾವು ಭಾರತದಲ್ಲಿ ಏಕೆ ಅನುಷ್ಠಾನಕ್ಕೆ ತಂದಿಲ್ಲ ಎಂಬ ಕುತೂಹಲ ಮೂಡುತ್ತದೆ.

ನನ್ನ ಚಿಕ್ಕಂದಿನಲ್ಲಿ ಶಾಲಾ ಮಾಸ್ತರೆಂದರೆ, ಬಡ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಸ್ಥಿತಿವಂತ, ಅವನೊಬ್ಬ ಹೀರೊ ಎಂದು ಕಾಣುವುದು ವಾಡಿಕೆಯಾಗಿತ್ತು. ಬಹುಶಃ ಹಾಗಿದ್ದಿರಲೂ ಬಹುದು. ಆದರೆ ಕಾಲ ಸರಿದಂತೆ ವಿದ್ಯಾರ್ಥಿಗಳು ಮುಂದುವರಿದು ಶಿಕ್ಷಕರ ಪರಿಸ್ಥಿತಿ ಶೋಚನೀಯವಾಗಿರುವಂತಿದೆ. ಮೊನ್ನೆ ತಿಪಟೂರಿಗೆ ಹೋಗಿದ್ದಾಗ ಅಲ್ಲಿನ ಪ್ರವಾಸೀ ಮಂದಿರದ ಹೊರಗಿನ ಬಯಲಿನಲ್ಲಿ ಹಲವು ಹುಡುಗರು ಆಟವಾಡುತ್ತಿದ್ದುದನ್ನು ನೋಡಿದೆ. ಗುಲ್ಲೋರಿಯಾ, ಕತ್ತಿಕಾಯಿ ಹಿಡಿದು ಕತ್ತಿ ಸೆಣಸಾಟ, ಗೋಲಿ ಇವೆಲ್ಲ ಆಟಗಳಲ್ಲಿ ಆ ಚಿಣ್ಣರು ಸಂತಸದಿಂದ ಮಗ್ನರಾಗಿದ್ದರು. ಬಯಲೆಲ್ಲಾ ಆ ಮಕ್ಕಳ ನಗೆ, ಕೇಕೆಯಿಂದ ತುಂಬಿತ್ತು.

ಏನೋ ಬಡ ಹುಡುಗರು, ತಿಂದುಕೊಳ್ಳಲಿ ಅಂತ ನಾನು ತಿಂದು ಉಳಿದಿದ್ದ ಆಹಾರವನ್ನು ಅವರಿಗೆ ಕೊಡುವ ಉದ್ದೇಶದಿಂದ ಕೆಲವರನ್ನು ನನ್ನ ಬಳಿಗೆ ಕರೆದೆ. ತಂಗಳೂಟವನ್ನು ಕೊಡುವ ಮೊದಲು, ಮೊದಲ ಹುಡುಗನನ್ನು ''ಯಾರಪ್ಪಾ ನೀನು? ನಿಮ್ಮಪ್ಪ ಏನ್ಮಾಡ್ತಾ ಇದಾರೆ?'' ಅಂತ ಲೋಕಾಭಿರಾಮವಾಗಿ ಕೇಳಿದೆ. ಅವನು ತನ್ನ ಹೆಸರು ಹೇಳಿ, ''ನಮ್ಮಪ್ಪ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್'' ಅಂದ. ನಾನು ವಿಚಾರಿಸಿದ ಇನ್ನಿಬ್ಬರು ಹುಡುಗರೂ ಕಾಲೇಜ್ ಅಧ್ಯಾಪಕರ ಮಕ್ಕಳು. ಹರುಕಲು ಬಟ್ಟೆ ಉಟ್ಟ ಆ ಮಕ್ಕಳು ಬರಿಗಾಲಿನಲ್ಲಿದ್ದರು. ನನಗೆ ಮನಸ್ಸು ಪಿಚ್ಚೆನಿಸಿತು. ಅದೂ ಇದೂ ಮಾತನಾಡುತ್ತಾ ''ನಿಮಗೆ ಇಷ್ಟವಾದ ತಿಂಡಿ ಏನ್ರೋ'' ಅಂತ ಕೇಳಿದೆ. ಎಲ್ಲರೂ ಒಕ್ಕೊರಲಿನಿಂದ ''ಉಪ್ಪಿಟ್ಟು'' ಅಂದರು. ಆಮೇಲೆ ಸ್ವಲ್ಪ ಯೋಚಿಸಿ ''ಅದೂ ಚಟ್ನಿ ಜೊತೇಗೆ'' ಅಂತ ಬಾಯಿ ಚಪ್ಪರಿಸಿದರು. ''ಅದೇಕೆ ಚಟ್ನಿ ಆಮೇಲೆ ನೆನಪಿಗೆ ಬಂತು?'' ಅಂತ ಕೇಳಿದ್ದಕ್ಕೆ ''ಉಪ್ಪಿಟ್ಟಿನಲ್ಲೇ ಮೆಣಸಿನಕಾಯಿ ಚೂರುಗಳು ಇರುತ್ತಲ್ಲಾ. ಚಟ್ನೀ ಮಾಡೋದು ಒಂದೊಂದ್ಸಲ'' ಅಂತ ಒಬ್ಬ ಉತ್ತರಿಸಿದ. ನನ್ನ ಕುತೂಹಲ ತಣಿಸಲು ಅವನನ್ನು ಇನ್ನೂ ವಿವರವಾಗಿ ಪ್ರಶ್ನಿಸಿದೆ. ಅದರ ಸಾರಾಂಶ ಹೀಗಿತ್ತು.


ಅವನ ಅತ್ಯಂತ ಸಂತಸದಾಯಕ ಅನುಭವವೆಂದರೆ ತಿಂಗಳಿಗೊಮ್ಮೆ ಹಳ್ಳಿಯಲ್ಲಿರುವ ತನ್ನ ಅಜ್ಜಿಯ ಮನೆಗೆ ಭೇಟಿ. ಸುಮಾರು ಇಪ್ಪತ್ತು ಕಿಲೋಮೀಟರ್ ದೂರದ ಆ ಹಳ್ಳಿಯಲ್ಲಿ ಸೇರಬೇಕಾದರೆ ಅರ್ಧ ದೂರ ಹಳ್ಳಿಯ ಬಸ್ಸಿನಲ್ಲಿ ಪಯಣಿಸಿ ಮಿಕ್ಕ ಅರ್ಧವನ್ನು ಕಾಲು ನಡಿಗೆಯಲ್ಲೇ ಮುಗಿಸಬೇಕಾಗಿತ್ತು. ಮನೆ ಸೇರಿದ ಮೇಲೆ ಅಲ್ಲಿ ವಾತ್ಸಲ್ಯದಿಂದ ನೀಡುತ್ತಿದ್ದ ರಾಗಿ ಮುದ್ದೆ ಊಟ ಹಾಗೂ ಅವನ ಪಿಗ್ಮಿ ಡಬ್ಬಕ್ಕೆ ಒಂದು ರುಪಾಯಿ ಕಾಣಿಕೆ ಇವನ್ನು ಈ ಹುಡುಗ ಅತ್ಯಂತ

ಸಂತಸದಿಂದ ನೆನಪಿಸಿಕೊಂಡ. ಎಲ್ಲ ಹುಡುಗರಿಗೂ ತಮ್ಮ ಅಜ್ಜ, ಅಜ್ಜಿ, ತಂದೆ ತಾಯಿಯರ ಮೇಲೆ ಅಭಿಮಾನ ಗೌರವ ತುಂಬಿದ್ದು ತಮ್ಮ ಬಾಳನ್ನು ಅವರುಗಳು ಸುಖ ಸಂತಸಗಳಿಂದ ಕಳೆಯುತ್ತಿದ್ದರು. ಅದನ್ನು ನೋಡಿದ ನಂತರ ನನ್ನ ತಂಗಳು ಊಟವನ್ನು ಅವರಿಗೆ ಕೊಡಲು ಯಾಕೋ ತುಂಬಾ ಸಂಕೋಚವಾಯಿತು.

ಪಾಪ, ಚೈನಾದವರೇನೋ ಒಳ್ಳೆಯ ಉದ್ದೇಶದಿಂದಲೇ ತಮ್ಮ ಜೀವನ ಶೈಲಿಯನ್ನು ರಚಿಸಿಕೊಂಡಿರಬಹುದು. ಮೊದಲಿಗೆ, ಎಲ್ಲರಿಗೂ ಒಂದೇ ಬಗೆಯ ಸಮವಸ್ತ್ರ. ಆಮೇಲೆ ಜನಸಂಖ್ಯೆ ಬೆಳೆಯದಿರಲಿ ಎಂಬ ಉದ್ದೇಶದಿಂದ ಕುಟುಂಬಗಳನ್ನು ಬೇರ್ಪಡಿಸಿ ದೂರದೂರ ಇಡುವ ಘನ ಯೋಜನೆ. ಸಾಮೂಹಿಕ ಅಡುಗೆಮನೆ ವ್ಯಾವಹಾರಿಕವಾಗಿ ಹೆಚ್ಚು ಅನುಕೂಲ ಎಂತ ಚಿಂತನೆ. ಮಕ್ಕಳು... ಆಹಾ ಮಕ್ಕಳು ಸಮಾಜದ ಜವಾಬ್ದಾರಿ ಅಂದಮೇಲೆ ತಂದೆ ತಾಯಿಯರಿಗೆ ಅವರ ಮೇಲೆ ಏನು ಹಕ್ಕು? ಈ ಬಗೆಯಲ್ಲಿ ಒಂದೇ ಬಣ್ಣದ (ಅದೂ ಬೇಜಾರು ಬೂದು) ಬಟ್ಟೆ ಧರಿಸಿರುವ ಗ್ರಾಹಕ ಸಮೂಹವನ್ನ ವೃದ್ಧಿಪಡಿಸಿ ಅದರಿಂದ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಿ ಕೊನೆಗೆ ''ಅಮೆರಿಕಾದ ಜೀವನ ಶೈಲಿ''ಯನ್ನು ತಲುಪುವುದು ಅವರ ಗುರಿಯಾಗಿರಬಹುದು.

ಇದೆಲ್ಲದರ ನಡುವೆ ನಾವು ಭಾರತದಲ್ಲಿ ಜನರಿಗೆ ಜನ ಅಗತ್ಯ ಎಂಬ ತತ್ವವನ್ನು ಪಾಲಿಸಿಕೊಂಡೇ ಬಂದಿದ್ದೇವೆ. ಸಮಾಜದ ಕಡುಬಡತನ ಅಂಚಿನಲ್ಲಿರುವ ಜನತೆಯ ಅತ್ಯಂತ ತೀವ್ರ ಅಗತ್ಯಗಳನ್ನಾಗಲೀ, ಗ್ರಾಹಕ ಸಮಾಜದ ಸಾವಿರಪಟ್ಟು ಹೆಚ್ಚಿನ ಅಗತ್ಯಗಳನ್ನಾಗಲೀ, ಗಣಿತದ ನಿಷ್ಠುರತೆಯಿಂದ ಭಟ್ಟಿ ಇಳಿಸಿ ನೋಡಿದಲ್ಲಿ, ಕೊನೆಯಲ್ಲಿ ಶೇಷ ರೂಪವಾಗಿ ಹಿಂಗದ ಅಗತ್ಯವೊಂದು ಮೂಸೆಯಡಿಯಲ್ಲಿ ಮೂಡುತ್ತದೆ. ಮನುಷ್ಯನಿಗೆ ಮನುಷ್ಯನ ಅಗತ್ಯವೇ ಅದು.

''ಮುದವ ನೀಡಿಹೆ ನೀನು, ನೂರು ಸವಿಗಳ ಜೇನು, ಬಾ ನನ್ನ ಸಂಗಾತಿಯೇ''



ಇರಾಕ್ ನಾಮಾ

- ಶಿವು

ಗ್ಲಾನಿಯುಂಟಾಗಿಹುದು ಮನದಲಿ
ಆನೆ ಗುರುತಿನ ನಮ್ಮ ಪಕ್ಷಕೆ
ಊನವಿಲ್ಲದೆ ಗೆಲುವ ಮಾರ್ಗವದೇನು ಬಿನ್ನವಿಸಿ
ಜನರ ಮತಗಳ ಗೆಲುವ ಸುಲಭದಿ
ಹಣದ ಹೊಳೆಯದು ನಿಜಕು ಮುಖ್ಯವು
ಏನ ಮಾಡಲಿ ಹೇಳಿ ರೀಗಳೆ ಎಂದನಾ ಬುಷ್ಷ

ತೈಲ ಸಿರಿಯದು ನಮಗಗತ್ಯವು
ತೈಲ ಸಿರಿಯಿರೆ ಅದುವೆ ಶೋಭೆಯು
ತೈಲ ಭರಿತ ಇರಾಕು ನಾಡಿನ ಲಗ್ಗೆ ನಮ್ಮ ಗುರಿ
ತೈಲ ಕೂಪದ ಗಡಣ ಹರಡಿಹ
ತೈಲ ತುಂಬಿಹ ನೆಲನ ಕಬಳಿಸಿ
ಥೈಲಿ ಹಣವನು ತಂದು ಸುರಿಯುವೆನೆಂದನಾ ಛೈನಿ

ಡಿಕ್ಕು ಛೈನಿಯ ಮಾತು ಸತ್ಯವು
ಠಕ್ಕು ಕಾರಣ ಇಟ್ಟು ಮುಂದಕೆ
ರೆಕ್ಕೆ ಬಲಿಯುವ ಮೊದಲೆ ಹಿಡಿಯಿರಿ ಖೂಳಸದ್ದಮನ
ಹಕ್ಕದೆಮ್ಮದು ಕಪ್ಪು ಜನರಿಗೆ
ಇಕ್ಕಿ ಏಟನು ಮುರಿದು ಗೋಣನು
ಮುಕ್ಕಲಾಜನ ಮಣ್ಣು ಮರಳನು ಎನಲು ಕಾಂಡೊಲಿಸ

ಅರಿತೆ ನೀಗಳೆ ನಿಮ್ಮ ಚಿಂತನೆ
ಭರದಿ ನಡೆಸುವೆ ಸಮರ ಸನ್ನಹ
ಕರೆದು ಮೊದಲಿಗೆ ನಮ್ಮ ಮಿತ್ರರ ಒಂದು ಗೋಷ್ಠಿಯನು
ಇರುವ ಮೂವರು ಬೆಂಬಲಿಗರಲಿ
ಕುರಿಯ ಮರಿವೊಲು ಬೆನ್ನು ಬಿಡದಿಹ
ಬ್ಲೇರ ಕರೆಯುತ ಬುಷ್ಷು ಕೂಗಲು ಟೋನಿ ಟೊನಿ ಟೋನಿ

ಕರೆದ ತಕ್ಷಣ ಓಡುತೋಡುತ
ಬರುವ ಶುನಕನ ಮರಿಯ ತೆರನಲಿ
ಬ್ಲೇರು ಬಂದನು ಬುಷ್ಷ ಕರೆಯನು ಕೇಳಿದಾಕ್ಷಣವೆ
ಇರಲು ಸ್ಪೆಯಿನಿನ ಮುಖ್ಯ ಮಂತ್ರಿಯು
ಮೂರು ಚೋರರು ಒಂದುಗೂಡಲು
ಮೇರೆಯಿಲ್ಲದ ಮಾತು ನಡೆದುದಜೋರು ದ್ವೀಪದಲಿ

ಪೇಳಲಿನ್ನೇನಿಹುದು ಇರಕರ
ಕಾಲ ಸಂದುದು ಅವರ ಗಡಿಯಲಿ
ಮೇಳವಿಸಿದುದು ಸೇನೆ ಪಡೆಗಳು ಕುವಯಿತಾಶ್ರಯದಿ
ಆಳ ಸಂಚಿನ ಜಾಣ ಷಿರಕನು
ಗಾಳವೆಸೆಯುತ ಪುಟಿನನೊಂದಿಗೆ
ಜಾಲ ಬೀಸಲು ಜನತೆ ಕೂಗಿತು ಶಾಂತಿ ಘೋಷಣೆಯ

ಎರಡು ನದಿಗಳ ನಾಡಿರಾಕಿನ
ಬರಡು ಬಂಜರು ಮರಳು ಕಾಡಲಿ
ಉರಗ ಸದೃಶ ಸೇನೆ ನೆರವಿಯು ಹರಡಿ ಹೊರಳಿದುದು
ಗುರಿಯು ಬಾಸ್ರಾ, ಬಳಸಿ ಊರನು
ಹಿರಿಯ ಅಧಿಕಾರಿಗಳು ನುಡಿದರು
ಕುರಿತು ಕೊಂದರು ಚಿಂತೆಯಿಲ್ಲವು ಬಿಡುಗಡೆಯೆ ಮುಖ್ಯ

ಕೊಲುವ ಪಕ್ಕದು ದೊರೆಯಿತೆಂದಿಗೆ
ಅಳುವ ಮಗುವಿನ ಕ್ರೂರ ಚಿತ್ರಣ
ಕಲಹ ಕೋಲಾಹಲದಿ ಸಿಕ್ಕಿಹ ಜನರ ಪಾಡೇನು
ಬಿಳಿಯ ಮಾಡಿದುದೆಲ್ಲ ಸರಿಯದು
ಇಳೆಯ ಮಿಕ್ಕವರೆಲ್ಲ ಶನಿಗಳು
ಕಾಲ ಪುರುಷನೆ ನ್ಯಾಯ ದೊರಕಿಸಿರೆಂದಳಪರಂಜಿ

ತಮಾಮ್ ಷುದ್

ಬೆಂಗಳೂರಿನ ನೋಟಗಳು

ಲೇಖಕರು: ಕೆ. ಚಂದ್ರಮೌಳಿ, ಪ್ರಕಾಶನ: ಪ್ರಿಸಮ್, ಪುಟಗಳು: 414, ಬೆಲೆ: ರೂ. 180/-

ನಾಸ್ಟಾಲ್ಜಿಯಾ ಎಂದಿಗಾದರೂ ಬೆಚ್ಚಗಿನ ಅನುಭವವೇ. ಅದರಲ್ಲೂ ಬೆಂಗಳೂರಿನಂತಹ ಕಾಸ್ಮೋಪಾಲಿಟನ್ ಪಟ್ಟಣದಲ್ಲಿ ಹುಟ್ಟಿ ಬೆಳೆದವರಿಗೆ, ಇಲ್ಲಿನ ಕಟ್ಟಡಗಳ, ಸ್ಮಾರಕಗಳ, ಕೆರೆಕೊಳಗಳ ಕುರಿತು ಚಾರಿತ್ರಿಕ ಮಾಹಿತಿಯನ್ನು ಓದುವುದೆಂದರೆ ನಿಜಕ್ಕೂ ಅದೊಂದು ಅಪೂರ್ವ ಅವಕಾಶ. ಈ ಎಲ್ಲ ವಿಷಯಗಳನ್ನೂ ಆಸಕ್ತಿ ಮೂಡಿಸುವ ಶೈಲಿಯಲ್ಲಿ ತಿಳಿಸುವ ಸ್ತುತ್ಯ ಯತ್ನವೇ ಶ್ರೀ ಚಂದ್ರಮೌಳಿಯವರ ''ಬೆಂಗಳೂರಿನ ನೋಟಗಳು''.

ಯಲಹಂಕ ನಾಡ ಪ್ರಭುಗಳಿಂದ ಮೊದಲುಗೊಂಡು, ಟೀಪು, ಇಂಗ್ಲೀಷರು, ದಿವಾನರ ಆಳ್ವಿಕೆ, ಸ್ವಾತಂತ್ರ ಚಳುವಳಿ ಇವೆಲ್ಲದರ ಛಾಯೆ ಬೆಂಗಳೂರನ್ನು ರೂಪಿಸಿದ ಬಗೆಯನ್ನು ಕುರಿತ ಅಧ್ಯಾಯಗಳು ನಿಜಕ್ಕೂ ಈ ಪುಸ್ತಕವನ್ನು ಕೆಳಗಿಡಲು ಮನಸ್ಸಾಗದಂತೆ ಮಾಡುತ್ತವೆ. ''ಬೆಂಗಳೂರು ಸಿಟಿ ರೈಲ್ವೇ ಸ್ಟೇಷನ್ನಿನ ಮೆಟ್ಟಲುಗಳನ್ನು ಇಳಿದು ..... ಸ್ವಲ್ಪ ದೂರ ಹೋಗುವುದರೊಳಗೆ ಎದುರಿಗೆ ದೊಡ್ಡಕೆರೆ. ಹೆಸರು ಧರ್ಮಾಂಬುಧಿ. ಕೆರೆಯ ತುಂಬಾ ನೀರು, ನೀರು ಹಕ್ಕಿ. ನೀರಿನ ಮೇಲೆ ತಣ್ಣಗೆ ಬೀಸುವ ಗಾಳಿ... ಆ ಗಾಳಿ ಎಷ್ಟೋ ಶ್ರಮ ಪರಿಹಾರಮಾಡುತ್ತಿತ್ತಲ್ಲದೆ ಮನಸ್ಸಿಗೆ ಸಂತೋಷವನ್ನೂ ಉಂಟುಮಾಡುತ್ತಿತ್ತು.... ಕೆರೆಯಲ್ಲಿ ನರಸಿಂಹ ಜಯಂತಿಯ ರಾತ್ರಿ ಬಳೇಪೇಟೆ ನರಸಿಂಹ ದೇವರ ತೆಪ್ಪೋತ್ಸವ ತುಂಬ ವಿಜೃಂಭಣೆಯಿಂದ ನಡೆಯುತ್ತಿತ್ತು....'' ಇಪ್ಪತ್ತನೇ ಶತಮಾನದ ಮೊದಲ ದಶಕದ ಬೆಂಗಳೂರಿನ ಚಿತ್ರಣವಿದು. ಪುಸ್ತಕ ತುಂಬ ಇಂತಹ ಅನೇಕ ಸಂಗತಿಗಳು ಓದಸಿಗುತ್ತವೆ.

ಅಪರಂಜಿ ಬಳಗದ ಶ್ರೀ ಚಂದ್ರಮೌಳಿಯವರು ವೃತ್ತಿಯಲ್ಲಿ ಇಂಜಿನಿಯರ್. ಪ್ರವೃತ್ತಿಯಲ್ಲಿ ಸಾಹಿತಿ. ಇವರ ಬರಹಗಳಲ್ಲಿ ಇಂಜಿನಿಯರಿಗೆ ತಕ್ಕುದಾದ ಸತ್ಯ ನಿಷ್ಠುರತೆ, ಹಾಗೂ ನಿರ್ಮಾಣ ಕೌಶಲವನ್ನು ಪ್ರತಿ ಪುಟದಲ್ಲೂ ಕಾಣಬಹುದು.

ಒಟ್ಟಿನಲ್ಲಿ ಯಾವುದಾದರೊಂದು ಸಂಜೆ, ನಿಮ್ಮನ್ನು ಮನೆಗಾವಲಿಗೆ ಬಿಟ್ಟು, ಹೆಂಡತಿ ಮಕ್ಕಳು ಬಂಧುಗಳನ್ನು ನೋಡಲು ಹೋಗಿದ್ದಾಗ, ಹೊರಗೆ ಜಡಿಮಳೆ ಸುರಿಯುತ್ತಿರುವಂತೆ ಮನೆಯೊಳಗೆ ಬೆಚ್ಚಗೆ ಕುಳಿತು, ಪಕ್ಕದಲ್ಲಿ ಕಾರದ ಕಡಲೇಕಾಯಿ ತುಂಬಿದ ಡಬ್ಬಿಯೊಂದನ್ನಿಟ್ಟುಕೊಂಡು ಒಂದೇ ಓದಿಗೆ ಓದಿ ಮುಗಿಸುವಂತಹ ಪುಸ್ತಕ ''ಬೆಂಗಳೂರಿನ ನೋಟಗಳು''.

ನಿಮಗ ತಿಳೀತೇನ್ರಿ?

– ಎಸ್.ಎನ್. ಶ್ರೀಧರಮೂರ್ತಿ

'ಏನ್ರೀ-ರೀ, ತುಸು ಕೇಳ್ರಿ ಇಲ್ಲಿ. ನಾವಿಬ್ರೂ ಮದಿವಿ ಆದಮೇಲೆ, ಹುಬ್ಬಳ್ಳಿ ಶಹರದಾಗ - ನೀವು ಮುಂದ - ನಾನು ಹಿಂದ ಹೊಂಟ್ರೆ ಹಾದ್ಯಾಗಿನ ಮಂದಿ ಪಿಳಿ ಪಿಳಿ ಕಣ್ ಬಿಡ್ತಾ ನೋಡ್ತಿದ್ರು ಅಲ್ವೇನ್ರಿ? ಎಂಥಾ ಛಲೋ ಜೋಡಿನಪ್ಪಾ! ಇವರದು ಅಂತ ನಮಗ ಕೇಳಸಾ ಹಂಗ ಮಾತಾಡತಿದ್ರು, ನಾವಿಬ್ರೂ ಮನೀಗೆ ಬಂದ್ಮೇಲೆ ನಮ್ಮ ಅವ್ವ ''ಪಾಪಿಕಣ್ಣ ಪರದೇಶಿಕಣ್ಣ - ಕಂಡಾರಕಣ್ಣ - ಕಾಣದೋರ ಕಣ್ಣ - ಹಾದಿ ದೃಷ್ಟಿ ಬೀದಿ ದೃಷ್ಟಿ ಅಂತ ನಿವಾಳಿಸಿ, ದೃಷ್ಟಿ ತಗದು- ಲಟಕಿ ಮುರೀತಿದ್ಳು - ನೆನಪದಾನೊ ಏನು ನಿಮಗ.''

★★★

ರೀ, ನಾನ್ ನಿಮಗ ಒಂದಾ ಸಮ ಹೇಳಾಕೆ ಹತ್ತೀನಿ ಕೇಳಸ್ತದೋ? ಇಲ್ಲೊ? ನಾನು ನೋಡೇ ನೋಡ್ತೀನಿ, ದೀಡ್ ತಾಸ್‌ನಿಂದ, ಒಂದು ಸಮ ವದರಲಿಕ್ಕೆ ಹತ್ತೀನಿ, ಭಗವದ್‌ಗೀತಾ ಹಿಡಕೊಂಡು ಕೂತುಬಿಟ್ರೆ ಆತು! ಆತಪಾ ಆತು! ಆ ಶ್ರೀಕ್ರಿಷ್ಣ ಪರಮಾತ್ಮ ಏನಾದ್ರು ಬಂದು, ನಿಮಗ ಪ್ರತ್ಯಕ್ಷ ಆಗಿ, ನೀವು ಬೇಡಿದ್ದು ಕೊಡ್ತಾನೇನು? ಆ ಕಳ್ಳ ಕೃಷ್ಣಂಗೆ ಏನು ಗೊತ್ತು ಮಂದೀಗೆ ಬೋಧನಾ ಮಾಡೋದ ಒಂದುಬಿಟ್ಟು! ಏಳ್ರೀ ಲಗೂನ ಮಣೆಬಿಟ್ಟು, ಬೋಲಿ ಕೀಲಿ ಹತ್ತಕ್ಕೊಂಡು, ಲಗೂನ ಶೆಟ್ರ ಅಂಗಡೀಗೆ ಹೋಗಿ, ರೇಶನ್ ಸಾಮಾನತರ್ರಿ - ಟೈಮ್ ಸೀರ ತರದ ಹೋದ್ರ ಥಣ್ಣೀರು ಕುಡದು, ಸಾಲೀಗ ಹೋಗಬೇಕಾಗ್ತದ - ಲಗೂನ ಹೊಂಡ್ರಿ, ತಿಳೀತೇನ್ರಿ ನಿಮಗ?

''ರೀ, ಏನ್ರೀ, ಏನು ನಿಮಗ ನಿಮ್ಮ ಪುಣಪುತ್ರ, ರಾಮ್ಯಾ ಅಳೋದ ಕೇಳಸೋದ ಇಲ್ಲೇನು? ಅರ್ಧ ತಾಸಿನಿಂದ ಒಂದು ಸಮಾ ಅಳಲಿಕ್ಕೆ ಹತ್ಯಾನ - ಏನೂ ಮಾಡಿದ್ರು ಸುಮ್ನಾ ಆಗವಲ್ನಾ, ನನ್ನ ಒಬ್ಬಾಕಿಗೆ ಮಗ ಏನು ಅವ? ನಿಮಗ ಅವ ಹಿರೀಮಗ ಇದ್ದಾನ ತಿಳೀರಿ, ಕೂಸಿನ್ನು ಎತಗೊಂಡು ಹೊರಗ ಗಾಳ್ಯಾಗಿ ಹೋಗಿ, ಅಡ್ಡಾಡಿಸಿಕೊಂಡು, ಅಳೋದ ನಿಲ್ಲಿಸಿ ಸಂಭಾಳಿಸ್ರಿ, ಸೊಲುಪ ಸಮಾಧಾನ ಆದ್ಮೇಲೆ ಮನೀಗಿ ಬರ್ರಿ - ಇಲ್ಲದ ಇದ್ರ ನಿಮಗ ಗರಂ ಖಡಕ್ 'ಛಾ' ಸಿಗೋಣಿಲ್ಲ! ತಿಳೀತೇನ್ರಿ?

★★★

ಅಲ್ರೀ, ನೀವ್ ಸಾಲ್ಯಾಗ ಮಕ್ಕೀಗೆ ಏನು ಕಲಿಸ್ತೀರಿ? ಅನ್ನೋದ ಗೊತ್ತದ ಏನ್ ನಿಮಗ! ಎಲ್ಲಾ ಮಾಸ್ತರು ಕೂಡೆ ಕೂತು, ಫಂಟ್ ಬಡೀತಾ ಒದರಗಟ್ಟು ಕಾಳಪ್ಪನ ಛಾವಂಗಡೀಂದ 'ಛಾ' ತರಸಕೊಂಡು ಕುಡಿಯೋದು! ವಯಸ್ಸಿಗ ಬಂದ ಹೆಣ್ ಹುಡುಗೇರ ಗಲ್ಲಾ ಹಿಂಡಿ, ಅವರು ಅಳೋದ ನೋಡಿ ನೀವೆಲ್ಲಾ ನಗ್ಯಾಡೋದು, ಅಷ್ಟಾ ಹೌದಿಲ್ಲೊ? ಸರ್‍ಯಾಗಿ ನಿಷ್ಠಾದಿಂದ ಸಾಲ್ಯಾಗ ಹುಡುಗರಿಗೆ ಪಾಟ, ಮಗ್ಗಿ ಹೇಳಿಕೊಡೋದು ಕಲೀರಿ ಮೊದ್ಲ! ತಿಳೀತೇನ್ರಿ?

★★★

ರೀ, ರೀ, ಕೇಳ್ರಿ ಇಲ್ಲಿ ಕಿವಿಗೊಟ್ಟು, ''ಗೌಡ್ರ ಹೆಂಡ್ರ ಪಾರವ್ವ ಬಂದು, ಪಡಸ್ಯಾಲಾಗ ಕುಂತಾಳ, ಆಕೀ ಮಗ ಶಂಭುಂಗೆ ಕಕಾಕಿಕೀ ಕಾಗುಣಿತ, ಕೂಡಿಸೋ ಕಳಿಯೋ ಲೆಖ್ಖ ಬರವಲ್ಲಂತ! ಮುಂದ ಅವಶ್ಯಾಣಾ ಆದ್ಮೇಲ ಗೌಡ್ರ ಬಡ್ಡಿ ವ್ಯಾಪಾರ ಮಾಡೋಕ ಬರೋ ಅಷ್ಟ ಲೆಖ್ಖಾ ಛಂದಾಗ ಹೇಳಕೊಡ್ರಿ - ಕಾಗುಣಿತ ಒತ್ತಕ್ಷರನೂ ಹೇಳಕೊಡ್ರಲಾ, ಅವನ್ನ ಶ್ಯಾಣಾ ಆಗೋಹಂಗ ಮಾಡೇ ತೀರಬೇಕು. ತಿಳೀತೇನ್ರಿ?

★★★

ಏನ್ರೀ, ಕೇಳಸ್ತೇನು ನಿಮಗ, ಇವತ್ತು ನಳದಾಗ ನೀರು ಬರೋಣಿಲ್ಲ ಅಂತ ಊರ ತುಂಬಾ ಡಂಗೂರ ಸಾರ್‍ಯಾರ - ಏನ್ ಹಗಲಲ್ಲಾ ಹಾಳ್ ದುರಸ್ತಿ ನಡದದ ಏನೊ? ನೀರಿಲ್ಲ ಅಂದ್ರ ನನಗ ಬೇಸರಿಕಾನ ಆಗ್ತದ, ಏನ್ ಮಾಡ್ಲಕ್ಕೂ ತೋಚೋದ ಇಲ್ಲ - ಅಟ್ಟದ ಮ್ಯಾಲೆ ನಿಮ್ಮ ಅವ್ವ ಕೊಟ್ಟ ದೊಡ್ಡ ತಾಮ್ರದ ಕೊಡಾನ ಹುಣಸೀ ಹಣ್ಣ, ರಂಗೋಲಿ ಹಚ್ಚಿ, ಝುಳಾ ಝುಳಾ ಹೊಳಿಯೋ ಹಾಂಗ ತೊಳದು, ಊರಮುಂದ್ಲ ಶಾಂಭೋಗ್ರ ಭಾವ್ಯಾಗೆ ನೀರು ಜಗ್ಗೊಂಡು ತಗೊಂಬರ್‍ರಿ, ಲಗೂನ ಇಲ್ಲದ ಇದ್ರ ನಿಮಗ ಫರಾಳನೂ ಇಲ್ಲ - ಊಟಾನೂ ಇಲ್ಲ! ತಿಳೀತೇನ್ರಿ?

★★★

ಏನ್ರೀ, ನಿಮ್ ಸ್ವಭಾವನೋ ನಂಗ ಹಿಡಿಸೋದಿಲ್ಲ! ಊಟ ಆದ್ಮೇಲೆ ಅದೇನ್ ಗೊರ್‌ಕಿ ಹೊಡೀತೀರಿ ಗೊರ್ ಗೊರ್ ಗೊರ್ ಅಂತ! ಸೊರ್ ಬುರ್ ಸೊರ್ ಬುರ್ ಅಂತ ಸಿಂಬಳಾ ಏರಿಸೋದು ಇಳಸೋದು! ನಿಮ್ಮ ಮೂಗಿನ ಹೊಳ್ಳಿ ಮ್ಯಾಲ ಕೂತಗೊಂಡು ಇರೋ ನೊಣಗಳು ನಿಮ್ಮ ಗೊರ್‌ಕಿ ಶಬುದಕ್ಕ ಹೆದರಿ, ದಿಕ್ಕೆಟ್ಟು ಓಡ್ತಾವ, ಸಲುವ ಕಡಿಮಿ ಊಟ ಮಾಡೋದ ಕಲೀರಿ -

ನಂಗಂತೂ ಭಾಳ ಅಸಯ್ಯ ಆಗ್ತದರಿ! ನಿಮ್ಮ ಗೊರಕಿ ಹೊಡಿಯೋದ ಕೇಳಿ. ಇನ್ ಮುಂದಾದರೂ ಗೊರಕಿ ಕಡ್ಮಿ ಮಾಡ್ರಿ! ತಿಳೀತೇನ್ರಿ?

★★★

ರೀ, ನಿಮ್ ತಲ್ಯಾಗ ಸಗಣಿ ತುಂಬ್ಯಾದ ಏನು? ಕನ್ನಡ್ ಸಾಲಿ ಮಾಸ್ತರಾಗಿ, ಆ ಮಕ್ಕೀಗೆ ಛಲೋತಂಗ ಕಲಸೋದಬಿಟ್ಟು, ನೀವಾ ಹೀಂಗ ಮಾಡಿದ್ರಾ, ಹೇಂಗಾ? ಸ್ವಚ್ಛತಾ, ಸಭ್ಯತಾ, ನಮ್ರತಾ, ಛಲೋದು, ಕೆಟ್ಟದು - ಏನು ಎತ್ತ ಅಂತ ಅವರಿಗೆ ಹೇಳಿ ಕೊಡ್ರಿ,, ನೀವಾ ಹೀಂಗ ಮಾಡಿದ್ರ ಹ್ಯಾಂಗ. ನಂಗಂತೂ ಭಾಳ ಕೆಟ್ಟ ಅನಿಸ್ತು. ''ನೀವಾ ಸಾಲಿಗೋಡಿಗೆ ನಿಂತು ಉಚ್ಚಿ ಹೋಯ್ತೀರಿ ಅಂತ ತಳವಾರ ನಿಂಗಪ್ಪನ ಮಗ ಹಣಮಂತ ಹೇಳದಾ! ಇದು ಖರೇನೊ? ಹೌದೊ? ಇಲ್ಲೊ? ಹೇಳ್ರಿ, ನೀವಾ ಗುರುಗಳಾಗಿ, ಮಾಸ್ತರಾಗಿ ಹಂಗಾ ಮಾಡಬಾರದಿತ್ತು! ಇನ್ಮೇಲೆ ಹಂಗ ಮಾಡಲ್ಲ ಅಂತ ಭಾಷಾಕೊಡ್ರಿ! ತಿಳೀತೇನ್ರಿ?

★★★

ಏನ್ರೀ, ಮುಂಜಾನಿ ನಾನ್ ನಿಮಗ ಶಿರಿಕಂಠಯ್ಯನ ಮನೀಂದ ಹಾಲು ತಗೊಂಬರ್ರಿ, ಅಂತ ಹೇಳಿದ್ರೆ, ನೀವ್ ಘಟ್ಟಿಮಜ್ಜಿಗಿ ತಂದೀರಲ್ರಿ! ನಿಮಗ ತಲಿ ಬರೋಬ್ಬರಿ ಆದನೊ ಇಲ್ಲೊ ಅವಸ್ತದನಂಗ, ಒಮ್ಮೆ ಕೆ.ಎಂ.ಸಿ.ಗೆ ಹೋಗಿ, ನಿಮ್ ಕಿವಿ ತಪಾಸನಾ ಮಾಡಿಸ್ಕೊಂಡು ಬರ್ರಿ, ತಿಳಿತೇನ್ರಿ?

★★★

ರೀ, ಕೇಳ್ರಿ ತುಸಾ, ನಂಗ ನಿಮ್‌ಮ್ಯಾಲ ಕಂಡಾಬಟ್ಟೆ ಸಿಟ್ಟಾ ಬರ್ತದ, ಯಾಕ ಅಂತೀರಾ? ನೀವು ಸಾಲಿ ಬಿಟ್ಟು ಮನೀಗಿ ಬರೋ ವ್ಯಾಳ್ಯಕ್ಕ ಸರ್‍ಯಾಗಿ ಪಕ್ಕದ ಮನಿ ಕಮಲಿ ಬಾಗಲಾಗೆ ನಿಂತು, ನೀವ್ ಬರೂದನ್ನ ನೋಡ್ತಾಳ ದಿನಾ! ಯಾಕ ಹಂಗ ಮಾಡ್ತಾಳ ಅವಳು? ನೀವು ಹತ್ರ ಬಂದ್ಮೇಲೆ ''ಮಾಸ್ತರಾ, ನಮ್ ಶಿವು ಹ್ಯಾಂಗ ಓದ್ತಾನ, ಬರೀತಾನ? ಅಂತ ನಕ್ಕೋತಾ ಕೇಳ್ತಾಳೆ. ಆಕೀ ಸುಟ್ಟ ಮಾರೀನ ನೋಡ್‌ಕೋತಾ ನೀವು ''ಕಮಲವ್ವಾ, ನಿನ್ ಮಗ ಶಿವು ಭಾಳ ಛಲೋತಾಂಗ ಓದ್ತಾನೆ, ಬರೀತಾನೆ, ಅವ ಶ್ಯಾಣಾ ಆಗ್ಯಾನ'' ಅಂತೀರಿ! ಆಕಿ ನಿಮ್ ಕಡೀನೋಡಿ, ಕಿಸಕ್‌ನೆ ನಕ್ಕು, ಅಲ್ಲೇ ನಿಂತಿರ್‍ತಾಳ! ಇದು ಖರೇನೋ? ಅಲ್ಲೋ? ನಂಗಂತೂ ನಿಮ್ಮಿಬ್ರ ನಗಾಟ - ಚೆಲ್ಲಾಟ ನೋಡಿ ನೋಡಿ ಹೈರಾಣಾಗೀನಿ - ಮನಸಿಗೆ ಬ್ಯಾಸರಿಕೀನೂ ಆಗ್ಯಾದೆ, ನಾನ್ ಏನ್ ಕಡಿಮಿ ಮಾಡೀನಿ ನಿಮ್‌ಗ ಹೇಳ್ರಲಾ! ಇನ್ಮೇಲಾ ನೀವು ಹಿತ್ಲಾಕಡಿ ಬಾಗ್ಲಿಂದ ಮನೀಗಿ ಬರಬೇಕು! ತಿಳೀತೇನ್ರಿ?

★★★

ರೀ... ರೀ... ಏನ್ರೀ... ರಾಯ್ರು... (ಮೆಲುಧ್ವನಿಯಲ್ಲಿ - ಕಿವಿಗಿಂಪಾಗುವಂತೆ) ನಿಮಗ ನೆನಪ ಆದನೊ ಇಲ್ಲೊ, ನಂಗಂತೂ ಸೊಲುಪ ನೆನಪದ - ಕಣ್ಣಿಗೆ ಕಟ್ಟಿದಂಗ ಅದ - ಹೇಳ್ತೀನಿ ಕೇಳ್ರಿ ಖುಷಿ ಪಡ್ರಿ ತುಸಾ! ನಮ್ ಮದ್ವಿ ಆದ ಹೊಸತರಾಗ ಅದೇನ್ ಹುರುಪು - ಅದೇನ್ ಪ್ರೀತಿ, ಅದೇನ್ ಪ್ರೇಮ - ಹೇಳಲಿಕ್ಕೆ ಆಗಲ್ಲಾ! ಖೋಲಿ ಬಾಗಲ ಚಿಲಕ ಹಾಕಿ ದಮ್ಯಾಲೆ, ದೀಪ ಕಳವಿ'' ನೀವು ನನ್ನ ಅಜಾಮತ ಎತಗೊಂಡು, ನನ್ ಕಣ್ಣಾಗ ಕಣ್ಣಿಟ್ಟು, ನನ್ನ ಉದ್ದಾನ ಕೂದಲ ಸವರ್ತಾ ರನ್ನ, ಚಿನ್ನ, ಮುತ್ತು, ಹವಳ, ವಜ್ರ, ವೈಢೂರ್ಯ ಅಂತ ಹೇಳಿ ಕುಣಿದಿರಿ. ಮುತ್ತಿನ ಮಳೀನಾ ಸುರಿಸಿದಿರಿ! ಆಮ್ಯಾಲ ನಾನು ನಿಮಗ ಬೆಳ್ಳಿ ಪ್ಯಾಲಾದಾಗ ಕೊಟ್ಟ, ಬಾದಾಮಿ ಕೇಸರಿ ಹಾಲ್ನ ಮೊದ್ಲ ನೀವು ಕುಡದು, ನಂಗೂ ಕುಡಿಸಿ, ತುಟ್ಟಿ ಕಚ್ಚಿದಿರಿ! ನನ್ ಉಬ್ಬಿದ ಹೂವಿನಂಥಾ ಗಲ್ಲಾನ ನಿಮ್ ಬಾಚಿ ಹಲ್ಲಿನಿಂದ ಕಡದು, ಗಾಯ ಮಾಡಿದ್ರಿ. ಇನ್ನೂ ಅದರ ಗುರ್ತು ಅದ - ನೋಡ್ರಿ, ಇಲ್ಲಿ ಅಂತ ತೋರಿಸಿದಳು. ಆ ಛಲೋ ದಿನಗಳ ನೆನಸಕೊಂಡ್ರ ಮೈಮನ ಜುಮ್ ಅಂತಾವೆ. ಹೌದಲ್ಲೊ? ರಾಯ್ರು!

ಆ ದಿನಗಳ ಸ್ಮರಣೀನಾ ಛಂದ ಅನಸ್ತಾದ - ಮತ್ತ ಯಾವಾಗ ಅಂಥಾ ರಸಘಳಿಗಿ ಬರ್ತಾವೋ ಏನೋ? ಅನಸ್ತದ.

ರೀ ಕೇಳ್ರಿ, ನಮ್ಮ ಅವ್ವ ಹೇಳಿದ್ಲು - ಬುದ್ಧಿ ಮಾತ್‌ನ - ನಿನ್ ಗಂಡ ಸಾಕ್ಷಾತ್ ಪರಮೇಶ್ವರ ಇದ್ದಾಂಗ, ಅವ ಏನ್ ಮಾಡಿದ್ರು ದೇವ್ರ ಪ್ರಸಾದ ಅಂತ ಸ್ವೀಕಾರ ಮಾಡಬೇಕು. ಕಯ್, ಕುಯ್ ಅನಬಾರದು. ಸಿಟ್ಟು, ಸೆಡವು, ಒಣ ಜಂಭಾ ಮಾಡಬಾರದು. ಯಾವಾಗ್ಲೂ ನಗ್ತಾನಗ್ತಾ ಇರಬೇಕು - ಗಂಡನ್ನ ಖುಶೀನೇ ನಿನ್ನ ಖುಷಿ ಅಂತ ತಿಳಿ - ಗಂಡ ಹೇಳಿದ್ದನ್ನ ಶಿರಸಾವಹಿಸಿ ಕೇಳಿಕೊಂಡು, ಅವರ ಹೇಳಿದ್ಹಾಂಗ ಬಾಳಿವಿ ಮಾಡಬೇಕು. ಅವರಿಗೆ ಎದುರುತ್ತರ ಕೊಡದ, ತಲಿಬಗ್ಗಿಸಿ ನಡೀಬೇಕು - ಅವರ ಪಾದ ಮುಟ್ಟಿ ನಮಸ್ಕಾರ ಮಾಡಬೇಕಾ ದಿನಾ ಎರಡು ಹೊತ್ತು''

ಅದನ್ನೆಲ್ಲಾ ಪಾಲಿಸ್‌ಕೋತಾ ನಿಮ್ ಕೂಡೆ ಮೂವತ್ತು ವರ್ಷದಿಂದ ಬಾಳ್ವಿ ಮಾಡಾಕ ಹತ್ತೀನಿ. ನೀವೂ ಛಲೋ ಮಂದೀನೇ - ಎಲ್ಲದಕ್ಕ 'ಹೂಂ' ಅಂತೀರಿ ಅಷ್ಟೆ! ನಾನು ಪುಣ್ಯವಂತಿ ನಿಮ್ಮಂಥಾ ಪತಿ ಪಡೆಯೋದಕ್ಕ!?

★★★

ಸ್ಥಿತರಪ್ರಜ್ಞ ತಿಮ್ಮಪ್ಪ - ಗಟವಾಣಿ - ಮಾತುಗಾತಿ ಶಾರದಮ್ಮನವರ ಜೀವನದ ಜೋಕಾಲಿಯಲ್ಲಿ ರಾಮು, ಪದ್ದಿ, ಕಿಟ್ಟಿ, ಕಾವೇರಿ ಸಹ ಸೇರಿ, ಟೀಕಿದರು

- ಗಂಡನ ಕಷ್ಟಿ ಪಗಾರದಾಗ ಶಾರದಮ್ಮ ಮಕ್ಕಳನ್ನ ಸಂಭಾಳಿಸಿಕೊಂಡು, ವಿದ್ಯಾ ಬುದ್ಧಿ ಕಲಿಸಿ, ಜೀವನದ ರಥ ಮುನ್ನಡೆಸಿದಳು. ಶೀನಪ್ಪ ಮಾಸ್ತರ ಯಾರ ಉಸಾಬರಿಗೂ ಹೋಗದ, ಸರಳ ಸಾಮಾನ್ಯ ಮನುಷಾ! ಎಲ್ಲದಕ್ಕೂ 'ಹೂಂ' ಗುಟ್ಟುವ ಸಾಧುಪ್ರಾಣಿ. ನಿಮಗ ಏನು ಅನುಸ್ತು? ನೀವೂ ಶೀನಪ್ಪನ ಹಂಗ ಇರಬಾರದಾ? ತಿಳೀತೇನ್ರಿ?

★★★

ಹಾಸ್ಯಚತುಷ್ಪದಿ

ಅವಿನಾಶನಲ್ಲ ಭುವಿಗೆ ಬಂದ ಈ ಮನುಜ
ಕಷ್ಟಕ್ಕಾದವ ಒಬ್ಬ ಇನ್ನೊಬ್ಬಗೆ ಅನುಜ
ಕಷ್ಟಸುಖಗಳೇನು ಹೇಳಿ ಬರುವ ರೇಲ್‌ಗಾಡಿಯಲ್ಲ
ಬದುಕೆಂಬ ಪಯಣದಲಿ ನಗೆ ಸರಕನ್ನ ಒಯ್ಯಿರಲ್ಲ

★★★

ಅಂಕುರಾರ್ಪಣವಾಗಲಿ ಬಾಳಿನ ಒಳ್ಳೆ ನಡತೆಗೆ
ಅಕ್ಷಯವಾಗಲಿ ಒಳ್ಳೆಯತನದ ಕಡತಕೆ
ಅಪರೂಪವೇನಲ್ಲ ಪರರ ಸಹಿಸುವ ಜನರು
ನಗೆ ತೋಟದಲ್ಲಿರುವವರೇ ಆಳ್ವ ಮಹಾರಾಜರು

★★★

ಅಟ್ಟುಣ್ಣುವುದು ಅನುದಿನದ ಕಾಯಕ
ಹುಟ್ಟು ಸಾವುಗಳ ನಡುವಿನ ಜೀವದಾಯಕ
ಇಲ್ಲಿ ಉಣಬೇಕು ನೀವೇ ತಂದಿಹ ಬುತ್ತಿ
ನಗೆ ಉಣಬಡಿಸಿ ನೀವು ಊರು ಸುತ್ತಿ ಸುತ್ತಿ

- ಬೇಲೂರು ರಾಮಮೂರ್ತಿ

ಬಾಂಬ್ ಬೇಕಾಗಿದೆ

- ಸೂರಿ ಹಾರ್ದಳ್ಳಿ

ಕಾಶೀಪತಿ ಬಗ್ಗೆ ನಿಮಗೆ ಗೊತ್ತಿರಬಹುದು. ರಾಜ್‌ಕುಮಾರ್ ಅಪಹರಣವಾದಾಗ ಒಂದು ಹೋಮ, ಒಂದು ವಿಶೇಷ ಪೂಜೆ, ಅನ್ನದಾನ ಮಾಡಿಸಿ ಬೇಗ ರಾಜ್ ಮನೆಗೆ ಬರಲಿ ಎಂದು ಬಯಸಿದ್ದ. ಭಾರತದ ತಂಡ ವಿಶ್ವಕಪ್ ಗೆಲ್ಲಲಿ ಎಂದು ಮಾರಮ್ಮನಿಗೆ ಕುರಿ ಬಲಿ ಕೊಟ್ಟು, ಸಾವಿರಾರು ಜನರಿಗೆ ಬಾಡೂಟ ಹಾಕಿಸಿದ್ದ. ಅಮೆರಿಕ ಇರಾಕ್ ಮೇಲೆ ಯುದ್ಧ ಶುರು ಮಾಡಿದಾಗ ಯುದ್ಧ ನಿಲ್ಲಿಸಲಿ ಎಂದು ಇನ್ನೊಂದು ಹೋಮ ಮಾಡಿಸುವವನಿದ್ದ, ಆದರೆ ಹಿಂದೂ ದೇವರು ಕ್ರಿಶ್ಚಿಯನ್ ಆದ ಬುಷ್ ಮೇಲೆ ತಮ್ಮ ಪ್ರಭಾವ ಬೀರಲು ಸಾಧ್ಯವಿಲ್ಲ ಎಂದು ಯಾರೋ ಹೇಳಿದ್ದರಿಂದ ಸುಮ್ಮನಾದ. ಈ ಕ್ರಿಯೆಗಳಿಂದ ಉಂಟಾಗುವ ಫಲ ಏನಾದಗಾರಲಿ, ನಮ್ಮ ಕಾಶೀಪತಿಯ ಮುಖ ಟಿವಿಯಲ್ಲಿ ಆಗಾಗ ಕಾಣಿಸಿಕೊಳ್ಳುತ್ತದೆ, ಅವನ ಹೆಸರು, ಭಾವಚಿತ್ರ ಪೇಪರುಗಳಲ್ಲಿ ಬರುತ್ತದೆ, ಧನ್ಯನಾದ ಅವನು.

ಮೊನ್ನೆ ಮೊನ್ನೆ ಐಶ್ವರ್ಯ ರೈ ಅಪಘಾತದಿಂದ ಕಾಲು ಮುರಿದುಕೊಂಡಾಗ ಆಕೆ ಬೇಗ ಗುಣಮುಖಳಾಗಲಿ ಎಂದು ಮತ್ತೊಂದು ಅನ್ನಸಂತರ್ಪಣೆ, ಹೋಮ, ವಿಶೇಷ ಪೂಜೆ ಏರ್ಪಡಿಸಿದ್ದ. ಐಶ್ವರ್ಯ ನಮ್ಮ ದೇಶದ ಹೆಗ್ಗಳಿಕೆ, ಮಿಸ್ ಯುನಿವರ್ಸ್, ಭಾರತದ ಪ್ರತಿನಿಧಿ. ಆಕೆ ಒಂದೇ ಒಂದು ಬಾರಿ ಸೀನಿದರೂ ಆ ವಿಷಯ ಮಕ್ಕಳಿಗೆ ಕೂಡಾ ತಿಳಿಯುತ್ತದೆ. ನೂರಾರು ಡಾಕ್ಟರು ತಾವೇ ಮುಂದುಬಂದು ಔಷಧೋಪಚಾರಕ್ಕೆ ಸಿದ್ಧರಾಗುತ್ತಾರೆ, ಬಿಡಿ. ಇದರಿಂದ ಪುರೋಹಿತರು, ಚಪ್ಪರದವರು, ವಾದ್ಯದವರು, ಅಡುಗೆಯವರು ಕಾಸುಮಾಡಿಕೊಂಡರು: ಪರವಾಗಿಲ್ಲ ಬಿಡಿ.

ಈ ಐಶ್ವರ್ಯ ರೈದು ಸ್ವಲ್ಪ ತಾಪತ್ರಯವಾಯಿತು. ಹೋಮ ಮಾಡಿಸುವ ಸಂದರ್ಭದಲ್ಲಿ ಅವನ ಹೆಂಡತಿ ಮಾದೇವಿ ರೋಗದಿಂದ ನರಳುತ್ತಿದ್ದಳು. ಆಕೆಗೆ ಔಷಧ ಕೊಡಿಸುವ ಬದಲು ಐಶ್ವರ್ಯ ಗುಣಮುಖಳಾಗಲಿ ಎಂದು ಅವನು ಪೂಜೆ ಮಾಡಿಸಿದ್ದಕ್ಕೆ ಅವನ ಅತ್ತೆ ಕೆಂಡಾಮಂಡಲವಾಗಿದ್ದಳು. ಮಾದೇವಿಯೇನು ಮಿಸ್ ಯುನಿವರ್ಸೇ? ಅವಳು ಸತ್ತರೂ, ಬದುಕಿದರೂ ಅಯ್ಯೋ ಪಾಪ ಎಂದು ಯಾರಾದರು ಎಂದಾರೆಯೇ? ಮನೆಯಲ್ಲಿ ಚಿಕ್ಕದೊಂದು ಯುದ್ಧವಾಯಿತು, ಈ ವಿಷಯ ನಮಗೆಲ್ಲ ತಿಳಿದೇ ಇದೆ. ಹಾಗಿರುವ ಸಂದರ್ಭದಲ್ಲಿ ಅವನು ಒಂದು ದಿನ ''ಒಂದು ಬಾಂಬ್ ಬೇಕಾಗಿದೆ ಕಣೋ... ಎಲ್ಲಿ ಸಿಕ್ಕುತ್ತೆ?'' ಎಂದು ಕೇಳಿದ. ಅತ್ತೆಯನ್ನು ಕೊಲ್ಲಲು ಬಾಂಬ್ ಬೇಕೇ? ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವೇ? ಅವನು

ತಮಾಷೆಯ ದನಿಯಲ್ಲಿ ಕೇಳಿರಲಿಲ್ಲವಾದ ಕಾರಣ ನನಗೆ ಶಾಕ್ ಆಯಿತು. ಎಲ್ಲಿ ಕಾಶೀಪತಿ, ಎಲ್ಲಿ ಬಾಂಬು?

''ನನ್ನನ್ನು ಕೇಳಿದರೆ ಏನು ಉಪಯೋಗವೋ? ಜಾರ್ಜ್ ಬುಷ್‌ನ ಕೇಳು, ಒಂದಿಷ್ಟು ಕಳಿಸಿಯಾರು. ಆ ಕಾರಣದಿಂದ ಇರಾಕ್‌ನಲ್ಲಿ ಕೆಲ ಜನರ ಪ್ರಾಣವಾದರು ಉಳಿದೀತು'' ಎಂದೆ.

''ನಾನು ಸೀರಿಯಸ್ ಆಗಿ ಕೇಳ್ತಿದ್ದೀನಿ... ಒಂದು ಬೇಕಿತ್ತು ತಕ್ಷಣ'' ಎಂದು ಧಾವಂತಿಸಿದ.

ಇದೇನು ಬಿಹಾರೇ. ಕಾಶ್ಮೀರವೇ ಬೇಕೆಂದಾಗಲೆಲ್ಲ ಬಾಂಬು ಸಿಗಲು? ಪಟಾಕಿಯೇ ಬೇಕಾದರೂ ಹುಡುಕಬೇಕಾದ ಬೆಂಗಳೂರು ನಗರ ಇದು. ಕುತೂಹಲಕ್ಕೆ ಕೇಳಿದೆ, ''ಏನಾದ್ರು ವ್ಯವಸ್ಥೆ ಮಾಡೋಣ, ಯಾಕೆ ಬೇಕೂಂತ ಹೇಳು'' ಎಂದೆ. ಅವನು ಹೇಳುವುದರಲ್ಲಿದ್ದನೇನೋ. ಆಗ ಬಾಸ್ ಬಂದರು. ನಮ್ಮ ಸಂಭಾಷಣೆ ಮುಂದುವರಿಯಲಿಲ್ಲ.

ನನ್ನನ್ನು ಕೇಳಿದ ಹಾಗೆ ಇನ್ನೂ ಹಲವಾರು ಜನರನ್ನು ಬಾಂಬ್ ಸಿಗುವ ಜಾಗದ ಬಗ್ಗೆ ಕೇಳಿದ್ದನಂತೆ ಕಾಶೀಪತಿ. ನನಗೆ ಅಚ್ಚರಿಯಾಯಿತು.

ಕಾಶೀಪತಿ ನೀವಂದುಕೊಂಡಂತೆ ಕೆಟ್ಟವನಲ್ಲ. ಎಲ್ಲ ಕನ್ನಡಿಗರ ಹಾಗೆ ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಪ್ರಾಣಿ. ತರಂಗ ಪತ್ರಿಕೆಯಲ್ಲಿ ಬರುವ ಕತೆಯ ಹಾಗೆ, ಟಿವಿ ಕಂಪೆರರುಗಳು ಮಾತಾಡುವ ಹಾಗೆ ಕಂಗ್ಲೀಷ್ ಭಾಷೆಯಲ್ಲಿ ಮಾತಾಡುತ್ತಾ, ಇಂಗ್ಲಿಷ್ ಪದ ಬಳಸಿದಾಗೆಲ್ಲ ಹಿಂದೊಂದು ಮಾಡು ಪದ ಬಳಸುತ್ತಾ ಇದ್ದ ಪ್ರಾಣಿ. ಅವನು ಮಾತಾಡುವುದು ಹೇಗೆ ಎಂದು ತಿಳಿಯಬೇಕೇ? ''ಮನೆ ಡೋರ್ ಓಪನ್ ಮಾಡಿ, ಲೈಟ್ ಆನ್ ಮಾಡಿ, ಟಿವಿ ಸ್ವಿಚ್ ಆನ್ ಮಾಡಿ ನೋಡ್ತೇನೆ...'' ಇತ್ಯಾದಿ.

ನನ್ನ ಹತ್ತಿರ ಮಾತ್ರವಲ್ಲ, ಇನ್ನೂ ಕೆಲವರ ಹತ್ತಿರ ಬಾಂಬ್ ಎಲ್ಲಿ ಸಿಗುತ್ತೆ ಎಂದು ವಿಚಾರಿಸಿದ್ದನಂತೆ ಅವನು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಮೊದಲು ಕಾರಣ ವಿಚಾರಿಸಬೇಕು ಎಂದು ಒಂದು ಸಂಜೆ ಅವನ ಮನೆಗೇ ಹೋದೆ. ''ನಿನಗೆ ಬಾಂಬ್ ಬೇಕು ತಾನೇ? ಕೊಡಿಸುತ್ತೇನೆ ಆದರೆ ಕಾರಣ ಹೇಳಬೇಕು'' ಎಂದೆ.

''ಮೊನ್ನೆ ಬೆಂಗಳೂರಿನ ಜಯನಗರದ ಪುಟ್ಟಣ್ಣ ಸಿನೆಮಾ ಮಂದಿರಕ್ಕೆ ಹೋದೆ, ಕತ್ತೆಗಳು ಸಾರ್ ಕತ್ತೆಗಳು ನೋಡಲು. ಕಲಾಸಿ ಪಾಳ್ಯದಲ್ಲಿ ಇರುತ್ತವಲ್ಲ, ಹಾಗೆ ಗಬ್ಬು ವಾಸನೆ ಮೂಗಿಗೆ ಅಡರಿತು. ಕುಳಿತುಕೊಳ್ಳಲು ಹೋದರೆ ಅಲ್ಲಿನ

ಸೀಟುಗಳು ಒಂದೋ ಮುರಿದಿವೆ, ಇಲ್ಲ ಹರಿದಿವೆ. ಹುಡುಕಿ ಹುಡುಕಿ ಒಂದು ಸೀಟಲ್ಲಿ ಕುಳಿತರೆ ಮೊಳೆಗೆ ಸಿಕ್ಕಿ ನನ್ನ ಪ್ಯಾಂಟ್ ಹರಿಯಿತು...''

ಬಾಂಬ್‌ಗೂ ಸಿನೆಮಾಕ್ಕೂ ಏನು ಸಂಬಂಧ? ನಾನು ಅವನ ಮಾತಿನ ವೇಗವನ್ನು ತಡೆಯಲಿಲ್ಲ.

''...ಸೆಖೆಯಿಂದ ಬೇಯುತ್ತಿದ್ದೆ. ಅದು ಹವಾ ನಿಯಂತ್ರಿತ ಚಿತ್ರಮಂದಿರವಾದರೂ ಹವೆಯೂ ಇಲ್ಲ, ಫ್ಯಾನೂ ಇಲ್ಲ. ಯಾರನ್ನೋ ಕೇಳಿದರೆ ಫ್ಯಾನು ಕೆಟ್ಟಿದೆ ಎಂಬ ಉತ್ತರ ಬಂತು. ಕೊನೆಗೂ ಮೂಲೆಯಲ್ಲಿನ ಒಂದು ಫ್ಯಾನ್ ರೋಡ್ ರೋಲರ್‌ನ ಹಾಗೆ ಶಬ್ದ ಮಾಡುತ್ತಾ ತಿರುಗತೊಡಗಿತು. ಸಿನೆಮಾದ ಮಾತಿಗಿಂತ ಅದೇ ಜೋರಾಗಿದ್ದ ಕಾರಣ ನಿಲ್ಲಿಸಿಬಿಡುವಂತೆ ಕೂಗಿದರು ಜನ.''

ನಾನು ಬಾಯಿ ಮುಚ್ಚಿಕೊಂಡು ಕೇಳತೊಡಗಿದೆ.

''ಕಾಲುಗಂಟೆ ತಡವಾಗಿ ಸಿನೆಮಾ ಶುರುವಾಯಿತು. ಚಿತ್ರ ಅಸ್ಪಷ್ಟವಾಗಿತ್ತು ಮತ್ತು ಮಸುಕು ಮಸುಕಾಗಿ ಕಾಣಿಸುತ್ತಿತ್ತು. ದನಿಯೋ, ದೇವರಿಗೇ ಪ್ರೀತಿ. ತಿಗಣೆಯಿಂದ ಕಚ್ಚಿಸಿಕೊಳ್ಳುತ್ತಾ, ಬೆವರನ್ನು ಒರೆಸಿಕೊಳ್ಳುತ್ತಾ ಪರದೆಯತ್ತ ಗಮನವಿಟ್ಟರೆ ಇಪ್ಪತ್ತು ಇಂಟರ್‌ವಲ್‌ಗಳು...'' ಎಂದ.

''ಅಷ್ಟು ದೊಡ್ಡ ಸಿನೇಮಾನಾ ಅದು?'' ಕೇಳಿದೆ.

''ಏನೂ ಅಲ್ಲ... ಹತ್ತು ನಿಮಿಷ ಬರುತ್ತೆ, ನಂತರ ಚಿತ್ರ ಮಾಯವಾಗುತ್ತೆ, ಜನ ಶಿಳ್ಳೆ ಹೊಡೆದರೆ ಮತ್ತೆ ಆರಂಭವಾದರೂ ಮತ್ತೆ ಅದೇ ಕತೆ. ಬಿಡಿ ಬಿಡಿ ದೃಶ್ಯಗಳು ಬಂದು ಕತೆ ಪೂರ್ತಿ ತಿಳಿಯುತ್ತಲೇ ಇರಲಿಲ್ಲ. ಮೂರು ಗಂಟೆ ನರಕ ಯಾತನ ಅನುಭವಿಸಿದೆ. ವೈರಿಗೂ ಬೇಡ ಈ ಗೋಳು....'' ಎಂದ ಕಾಶೀಪತಿ ಹೇಳಿದ, ''ಒಂದು ಬಾಂಬ್ ಹಾಕಿ ಆ ಥಿಯೇಟರ್ ಪುಡಿ ಮಾಡಿದರೆ ಪ್ರೇಕ್ಷಕರಿಗೂ ಸಂತೋಷವಾಗುತ್ತೆ, ಪುಟ್ಟಣ್ಣ ಕಣಗಾಲರ ಹೆಸರೂ ಉಳಿಯುತ್ತೆ. ಅದಕ್ಕೇ ನಾನು ಬಾಂಬ್ ಎಲ್ಲಿ ಸಿಗುತ್ತೆ ಎಂದು ಕೇಳಿದ್ದು'' ಎಂದ.

''ಅಷ್ಟೆಲ್ಲ ಕಷ್ಟ ತಗೋಬೇಡ, ಪೇಪರಿಗೆ ಬರೆದುಹಾಕು, ಸರಿಯಾದರೂ ಆಗಬಹುದು'' ಎಂದು ಸಲಹಿಸಿದೆ.

''ಅದೆಲ್ಲ ಸಮಯ ತಗೊಳ್ಳುತ್ತೆ. ಮುಂದಿನ ವಾರ ನನ್ನ ಅತ್ತೆ ಊರಿಗೆ ವಾಪಾಸು ಹೋಗ್ತಾರೆ. ಅಷ್ಟರೊಳಗೆ ಅವರನ್ನ ಈ ಸಿನೆಮಾ ನೋಡಲು ಕಳುಹಿಸಿ...'' ಎಂದು ಹೇಳುತ್ತಿರುವಷ್ಟರಲ್ಲಿ ಅವನ ಹೆಂಡತಿ ಅಲ್ಲಿಗೆ ಬಂದಳು. ಅವನು ಮಾತು ಮುಂದುವರಿಸಲಿಲ್ಲ.

ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ಅವನ ಪ್ರಯತ್ನ ಯಶಸ್ವಿಯಾಗಲಿ ಎಂದು ಹಾರೈಸಿದೆ.

... ಕ್ರಿಕೆಟ್ ಪುರಾಣ!

– ಹೆಚ್. ಗೋಪಾಲಕೃಷ್ಣ

ನನ್ನ ಕಲೀಗು ಗೋಪಣ್ಣನ ಸಂಗತಿ ನಿಮಗೆ ಈಗಾಗಲೇ ಸಾವಿರ ಸಲ ಹೇಳಿದೀನಿ ಅಂತ ಕಾಣುತ್ತೆ. ಅವನ ಎಬ್ಬಂಕತನ, ಅತಿಬುದ್ಧಿವಂತಿಕೆಗಳಿಗೆ ನಮ್ಮ ಹತ್ತಿರ ಹಲವಾರು ಕತೆಗಳು - ಹೇಳಬಹುದಾದ ಕತೆಗಳು - ಇವೆ. ಅದೇ ರೀತಿ ಹೇಳಲಾರದ ಕತೆಗಳು ಹೇಳಬಹುದಾದ ಕತೆಗಳಿಗಿಂತಲೂ ನೂರು ಪಟ್ಟು ಇವೆ. ಹೆಚ್ಚಿಗೆ ಮಾತುಕತೆಗಳಿಗೆ ಒಳಗಾಗದೇ ಮುಗುಂ ಆಗಿ ತನ್ನ ಕಂತ್ರಿ ಕೆಲಸ ನಡೆಸುವುದರಲ್ಲಿ ಈತ ಪ್ರಾವೀಣ್ಯತೆ ಪಡೆದಿದ್ದಾನೆ ಅಂತ ನಾವು ತಿಳಿದಿದ್ದೆವು. ಆದರೆ ಮಾತು ಬಲ್ಲಂತಹ ಈತನ ಆಪ್ತ ಈತನಿಗೇ ಚಳ್ಳೇಕಾಯಿ (ಚಳ್ಳೇಹಣ್ಣಲ್ಲ - ಗಮನಿಸಿ, ಚಳ್ಳೇಕಾಯಿ) ಇಟ್ಟಿದ್ದು ನಮಗೆ ಗೊತ್ತೇ ಇರಲಿಲ್ಲ. ಮೊನ್ನೆ ಈತನ ಬಳಿ ಮಾತನಾಡಲು ಆರಂಭಿಸಿದಾಗ ಮರಳು ಇಟ್ಟಿಗೆ ಸಿಮೆಂಟುಗಳ ರೇಟು ಕುರಿತು ಒಂದೊಂದೇ ಮುಕ್ತಾಫಲ ಎದುರಿಸಿದ. ಇವನ ಪರಿಧಿಯಲ್ಲಿನ ಆಚೆಗೆ ಈತ ಹೇಗೆ ಹೋದ ಅಂತ ದಿಗಿಲಾಯಿತು. ಅದೇನು ಸಿಮೆಂಟಿನ ಬೆಲೆ ಹೇಳ್ತಿದೀ? ನೀನೋ ಸಾಹಿತ್ಯ ಅಂದರೆ ಜೀವ ಬಿಡುವವ. ನಿನ್ನ ಇನ್ನೊಂದು ವೀಕ್‌ನೆಸ್ಸು ಅಂದರೆ ಕ್ರಿಕೆಟ್ಟು ಅಲ್ಲವೇ? ಅಂದೆ. ಅಳುಮೂತಿ ಮಾಡಿಕೊಂಡು ಆತ ವಿವರಿಸಿದ್ದು ಹೀಗೆ. ಪಾಪ ಈತನ ಪಾಡು ಕೇಳಿದ ನಂತರ ಕ್ರಿಕೆಟ್ಟನ್ನ ಬ್ಯಾನ್ ಮಾಡಬೇಕು ಅಂತ ಅನಿಸಿಬಿಟ್ಟಿತು. ಆದರೂ ಈತನ ಪ್ರಸಂಗ ನಿಮಗೆ ಹೇಳಲೇಬೇಕು. ಇಕೊಳ್ಳಿ ಹೀಗೊಂದು ಕ್ರಿಕೆಟ್ ಪುರಾಣ....

ನೀವು ಈವತ್ತಿಗೂ ಕ್ರಿಕೆಟ್ ಆಡ್ತೀರಾ? ನಿಮಗೆ ಕ್ರಿಕೆಟ್ ಆಡುವ ಸ್ನೇಹಿತರು ಇದ್ದಾರೇನು? ಈ ಎರಡೂ ಪ್ರಶ್ನೆಗೆ ನಿಮ್ಮ ಉತ್ತರ ಇಲ್ಲ ಅಂತ ನನಗೆ ಗೊತ್ತು. ಏಕೆ ಅಂದರೆ ಕ್ರಿಕೆಟ್ ಆಡುವ ಜನರಿಗೆ ಓದಲು ಪುರುಸತ್ತು ಎಲ್ಲಿರುತ್ತೆ? ಬಿಸಿಲಿನಲ್ಲಿ ಆಡಿ ಸುಸ್ತಾಗಿ ಬಂದ ಕೂಡಲೇ ತಲೆ ಮೇಲೆ ತಣ್ಣೀರು ಸುರಿದುಕೊಂಡು ಹೊಟ್ಟೆಗೆ ಕೊಂಚ ತಂಪದನ್ನ ಏರಿಸಿ ನಾಳೆ ಹೇಗೆ ಆಡತಕ್ಕದ್ದು ಅಂತ ಕನಸು ಕಾಣುತ್ತಾ ಮಲಗುವ ಕ್ರಿಕೆಟಿಗರೇ ಜಾಸ್ತಿ. ಇಂತಹವರು ಓದೋದು ಕ್ರಿಕೆಟ್ ನ್ಯೂಸುಗಳನ್ನ ಮಾತ್ರ - ಅದೂ ತಾವು ಚೆನ್ನಾಗಿ ಬ್ಯಾಟ್ ಮಾಡಿದಾಗಲೋ ಬೋಲ್ ಮಾಡಿದಾಗಲೋ ಪತ್ರಿಕೆಗಳಲ್ಲಿ ವರದಿ ಬಂದಾಗ. ಈ ವಿಷಯಗಳ ತೀರಾ ವಿರುದ್ಧ ಅಂತ ಅನ್ನಬಹುದಾದಂತಹವನು ನಾನು. ನಾನು ಈಗಲೂ ಕ್ರಿಕೆಟ್ ಆಡ್ತೇನೆ ಮತ್ತು ಓದೂ ಸಹ ಓದುತ್ತೇನೆ. ನಿನ್ನ ಕ್ರಿಕೆಟ್ಟು ಅಂತಹ ದೊಡ್ಡ ಕ್ರಿಕೆಟ್ ಅಲ್ಲದಿರುವುದರಿಂದ ಪೇಪರಿನಲ್ಲಿ ನನ್ನ ಹೆಸರು ನೀವು ಕಂಡಿರಲಾರಿರಿ. ಇದೇ

ಸರಬರಾಯಲ್ಲಿ ಸಣ್ಣ ಕ್ರಿಕೆಟ್ (ಸ್ಮಾಲ್ ಕ್ರಿಕೆಟ್-ಪೇಪರುಗಳಲ್ಲಿ ಬರದಿರುವ ಕ್ರಿಕೆಟ್ಟಿಗೆ ನಮ್ಮ ಪರ್ಯಾಯ ಭಾಷೆ) ಆಡುವ ಗೆಳೆಯ ನನಗುಂಟು. ಆತನ ಕ್ರಿಕೆಟ್ ಪ್ರತಾಪಗಳನ್ನು ಆತ ನನ್ನ ಮುಂದೆ ಆಗಾಗ ಕೊಚ್ಚುವುದುಂಟು. ಅದೂ ಸರಿರಾತ್ರಿ ಹನ್ನೆರಡು ಸರಿದ ನಂತರ ಬೆಳಗಿನ ಜಾವ ಒಂದು ಒಂದೂಕಾಲು ಗಂಟೆಗೆ ನನ್ನ ಮನೆಗೆ ಬಂದು ನನ್ನನ್ನು ಎಬ್ಬಿಸಿ ಆತನ ಕ್ರಿಕೆಟ್ ಪ್ರತಾಪ ಕೊಚ್ಚಿಕೊಂಡು ಬೆಳಗಿನ ಜಾವ ನಾಲ್ಕೂವರೆ ಸುಮಾರಿಗೆ ಆತ ಹೊರಡುವುದುಂಟು.

ಇದು ನಮ್ಮ ವಿವಾಹಪೂರ್ವ ದಿನಗಳಲ್ಲಿ ಒಂದು ರೂಟೀನ್ ಕ್ರಿಯೆಯಾಗಿತ್ತು. ಇಬ್ಬರೂ ಗುಂಡುಗೋವಿಗಳಾಗಿದ್ದರಿಂದ ಯಾವ ಅಡೆತಡೆ ಇಲ್ಲದೆ ರಾಜಾಜಿನಗರದ ರಾಮಮಂದಿರದ ಕಟ್ಟೆಯ ಮೇಲೆ ಕೂತು ಕ್ರಿಕೆಟ್ಟನ್ನು ಹರಿದು ಚೂರು ಮಾಡಿ ನಾಲಿಗೆಗೆ ಸೇರಿಸಿ ಕರಕರ ಅಗಿದು ನುಂಗಿ ನೀರು ಕುಡಿಯುತ್ತಿದ್ದೆವು. ನನ್ನ ಗೆಳೆಯನಿಗಿಂತ ಒಂದೂವರೆ ತಿಂಗಳು ಮೊದಲು ನನಗೆ ಸಂಸಾರದ ನೇಗಿಲು ಜೋತುಬಿದ್ದದ್ದು. ಒಂದೂವರೆ ತಿಂಗಳು ಆಗ ನಾನು ಆತನಿಗೆ ಸಿಗದಿದ್ದಾಗ ಆತ ಒಂದು ರೀತಿ ಹುಚ್ಚ ಆಗಿದ್ದನಂತೆ (ಹೀಗಂತ ಅವರಮ್ಮ ನಂತರ ಹೇಳಿದ್ದು). ನಂತರ ಆತನ ಕೊರಳಿಗೂ ನೇಗಿಲು ನೊಗ ಎರಡೂ ಬಿತ್ತು. ಸರಿ ಹುಚ್ಚು ಸರಿಹೋಗುತ್ತೆ ಅಂತ ಅವರಮ್ಮ ಖುಷಿಯಾಗಿದ್ದರಂತೆ (ಇದನ್ನೂ ಅವರಮ್ಮನೇ ಹೇಳಿದ್ದು). ಆದರೆ ಹುಚ್ಚು ಇನ್ನೂ ಅತಿ ಆಯಿತಂತೆ. ಹೆಂಡತೀನೂ ಜತೆಗೆ ಅಂಟಿಸಿಕೊಂಡು ಈತ ಕ್ರಿಕೆಟ್ ಮ್ಯಾಚುಗಳಿಗೆ ಅಂತ ಹೋಗುತ್ತಿದ್ದನಂತೆ. ಮ್ಯಾಚು ಮುಗಿಸಿ ಬಂದ ನಂತರ ಇಬ್ಬರೂ ಸೇರಿ ಮನೇಲಿರುವವರಿಗೆ ಕೊರೆಯುತ್ತಿದ್ದರಂತೆ.

ಮದುವೆ ಆದ ಒಂದು ವರ್ಷದಲ್ಲಿ ಹೆಂಡತೀಗೆ ಇನ್ನೂರು ಮೈಲಿ ದೂರದಲ್ಲಿ ಕೆಲಸ ಸಿಕ್ಕಿತ್ತು. ವಾರಕ್ಕೊಮ್ಮೆ ಅವಳು ಅಲ್ಲಿಂದ ಬರಬೇಕು. ಈ ಕಾರಣದಿಂದ ಇವನಿಗೆ ಮತ್ತೆ ಗಂಟುಬಿದ್ದದ್ದು ನಾನು. ಮೊದಲಬಾರಿ ರಾತ್ರಿ ಹನ್ನೆರಡೂವರೆಗೆ ಈತ ಬಂದು ಎಬ್ಬಿಸಿದಾಗ ಹೆಂಡತಿ ಗಾಬರಿ ಗಾಬರಿಯಿಂದ ''ಅದೇನು ಆಗಿದೆಯೋ ನೋಡಿ ಹೋಗ್ರೀ ಈ ನಿಮ್ಮ ಫ್ರೆಂಡು ಈ ಹೊತ್ನಲ್ಲಿ ಬಂದ ಅಂದರೆ ಯಾರಿಗೆ ಪಾಪ ಅದೇನಾಗಿದೆಯೋ'' ಅಂತ ಗಾಬರಿ ಪಟ್ಟಿದ್ದಳು. ಬೆಳಗಿನ ಜಾವದವರೆಗೆ ಈತ ಹಾಲಿನಲ್ಲಿ ಕುಳಿತು ಅವನ ಅಂದಿನ - ಅಲ್ಲ ಹಿಂದಿನ ದಿನದ ಕ್ರಿಕೆಟ್ ಕತೆ ಹೇಳುವುದನ್ನು ರೂಮಿನಲ್ಲಿಯೇ ನಿದ್ದೆಗೆಟ್ಟು ಕೂತು ಕೇಳಿಸಿಕೊಂಡಿದ್ದಳು. ಆತ ಕತೆ ಮುಗಿಸಿ ಹೊರಟ ನಂತರ ಇಡೀ ಕ್ರಿಕೆಟ್ ಆಡುವವರನ್ನೆಲ್ಲಾ ಸೀಬೈಟೂಗಳು ಎಂದು ಕರೆದಿದ್ದಳು. ರಾತ್ರಿ ಹನ್ನೆರಡೂವರೆಗೆ ಬಂದು ಪ್ರತಾಪ ಕೊಚ್ಚಿಕೊಳ್ಳೋದು ಅಂದರೆ ಹುಚ್ಚರಿಗೆ ಮಾತ್ರ ಸಾಧ್ಯ ಎಂಬ

ತೀರ್ಮಾನಕ್ಕೂ ಬಂದಿದ್ದಳು. ಈ ಕತೆ ಒಂದೇ ದಿವಸಕ್ಕೆ ಮುಗೀತದೆ ಅಂತ ತಿಳಿದಿದ್ದವಳಿಗೆ ಭಾರೀ ನಿರಾಶೆ ಕಾದಿತ್ತು ಅಂತ ಹೇಳೋದು ಬೇಡ. ಇದಾದ ಮೂರು ದಿವಸಕ್ಕೆ ಮತ್ತೆ ರಾತ್ರಿ ಹನ್ನೆರಡೂವರೆಗೆ ಬಾಗಿಲು ಡಬಡಬ ಅಂದಿತು. ಬಾಗಿಲು ತೆರೆದಾಗ ಈತ ನಿಂತಿದ್ದ. ಕತೆ ಯಥಾ ಪ್ರಕಾರ ಬೆಳಗಿನ ಜಾವ ನಾಲ್ಕೂ ಇಪ್ಪತ್ತೈದರವರೆಗೆ ಮುಂದುವರೀತು. ಇನ್ನೊಂದು ದಿನ ಆ ಶನಿ ಇಂತಹ ಅವೇಳೆಯಲ್ಲಿ ಬರಲಿ. ಮಂಗಳಾರತಿ ಎತ್ತಿ ಕಳಿಸ್ತೀನಿ' ಅಂತ ಶಪಥತೊಟ್ಟಳು. ಶಪಥ ತೊಟ್ಟ ನಾಲ್ಕನೇ ದಿವಸವೇ ಗೆಳೆಯ ಬಂದ. ಬಾಗಿಲು ತೆಗೆದು ಅವರಿಲ್ಲ ಮನೇಲಿ ಅಂತ ಇವಳು ಹೇಳಿದ್ದು ರೂಮಿನಲ್ಲಿದ್ದ ನನಗೆ ಕೇಳಿಸಿತು. 'ಹೋ ಅವನಿಲ್ಲಪಾ ಸಿಸ್ಟರ್? ಒಳ್ಳೇದೇ ಆಯಿತು ಸಿಸ್ಟರ್ ಬನ್ನಿ ಅವನ ಕಾಲೇಜಿನ ದಿವಸಗಳ ರೊಮಾನ್ಸ್ ಕತೆ ಹೇಳ್ತೀನಿ. ಅವನು ಕಾಲೇಜಿನಲ್ಲಿ ಅದೆಷ್ಟು ಲೈನೆರಿ ಆಗಿದ್ದ ಅಂದರೆ.... ಗಂಡನ ರೊಮಾನ್ಸ್ ಕತೆ ಕೇಳುಕ್ಕೆ ಅದೂ ಆ ಹೊತ್ತಿನಲ್ಲಿ ಯಾವ ಹೆಂಡತಿಗೆ ಇಷ್ಟ ಇರುಲ್ಲ ಹೇಳಿ? ಅದೂ ಈತ ಗೆಳೆಯನ ಫ್ರೆಂಡು ಸಿಸ್ಟರ್ ಸಿಸ್ಟರ್ ಅಂತಲೇ ಕರೀತಾನೆ. ಹೆಚ್ಚೂಕಮ್ಮಿ ಆದರೆ ಗಂಡ ಒಳಗಿದೆಯಲ್ಲಾ? ಹೆಂಡತಿ ಸೋಫಾದ ಈಕಡೆ ಕೂತಳು ಅವನು ಟೀಪಾಯಿಯ ಆಕಡೆ ಕೂತ. ನನ್ನ ರೊಮಾನ್ಸ್ ಕತೆ ಆರಂಭಿಸಿದ. ಅದೂ ಹೇಗೆ? 'ಫಸ್ಟ್ ಇಯರ್ ಬಿ.ಎಸ್‌ಸಿ ನಲ್ಲಿ ಸಿಸ್ಟರ್' ಅಂತ ಅವನು ಆರಂಭಿಸಿದ. 'ಫಸ್ಟ್ ಇಯರ್ ಬಿ.ಎಸ್‌ಸಿ ನಲ್ಲಿದ್ದಾಗ ಸಿಸ್ಟರ್ ಆಗತಾನೇ ಇವನನ್ನ ಕಾಲೇಜ್ ಟೀಂಗೆ ಸೆಲೆಕ್ಟ್ ಮಾಡಿದ್ದರು. ನಿಮಗೆ ಗೊತ್ತಾಲ್ಲಾ ಇವನು ಮೀಡಿಯಂ ಪೇಸ್ ಬೌಲರು ಅಂತ. ಮೀಡಿಯಂ ತರಹ ಫಾಸ್ಟ್ ಬೌಲಿಂಗು. ಆ ಕಾಲದಲ್ಲಿ ಫಾಸ್ಟ್ ಬೋಲಿಂಗು ನಮ್ಮವರಿಗೆ ಅಷ್ಟು ತಿಳಿದಿರಲಿಲ್ಲ. ಮೊದಲನೇ ಮ್ಯಾಚು. ಇವನಿಗೇ ಮೊದಲನೇ ಓವರು ಬೌಲ್‌ಮಾಡೋಕ್ಕೆ ಕೊಟ್ಟದ್ದು. ಬಾಲು ಇಸಿಕೊಂಡ. ಎಡಗೈಯಿಂದ ಬಲಗೈಗೆ ಬಾಲ್ ಎಸೀತಾ ಎಸೀತಾ ನಲವತ್ಮೂರು ಹೆಜ್ಜೆಗಳನ್ನ ಒಂದು ಎರಡು ಮೂರು ನಾಲ್ಕು ಐದು ಅಂತ ಎಣಿಸ್ತಾ ಎಣಿಸ್ತಾ ಹಾಕಿದ. ಇದು ಯಾಕೆ ಹಾಕ್ತಾರೆ ಗೊತ್ತಾ? ಫಾಸ್ಟ್ ಬೋಲಿಂಗ್ ಮಾಡಬೇಕಾದರೆ ಅದಕ್ಕೆ ವೇಗ ಬೇಕು ನೋಡಿ ಅದಕ್ಕೇ. ನಲವತ್ಮೂರು ಹೆಜ್ಜೆ ಹಾಕಿದ. ಆಗ ಇವನು ಹೇಗಿದ್ದ ಅಂತೀರೀ? ಅರವತ್ತೆರಡು ಕೇಜಿ ತೂಕ, ಐದಡಿ ಹನ್ನೊಂದು ಇಂಚು ಎತ್ತರ, ಎದೆ ನಲವತ್ನಾಲ್ಕು ಕಾಲಿನ ಶೂ ಸೈಜು ಹನ್ನೊಂದೂವರೆ. ಇವನು ಬಾಲನ್ನ ಕೈಲಿ ಹಿಡಿದು ಕುಣೀತಾಕುಣೀತಾ ಬಂದರೆ ಬ್ಯಾಟ್ಸ್‌ಮನ್ನು ಹೆದರಿ ಬಾಲನ್ನೂ ಸಹ ನೋಡದೇ ಬ್ಯಾಟು ಎಸೆದು ಓಡಿಬಿಡಬೇಕು ಹಾಗಿದ್ದ. ಎಗರಿಕೊಂಡು ಎಗರಿಕೊಂಡು ಎಗರಿಕೊಂಡು ಎಗರಿಕೊಂಡು ಬಂದ. ಸೀದಾ ಗೆರೆ ಹತ್ತಿರ ಬರ್ತಿದ್ದ ಹಾಗೇನೇ ಬೋಲ್ ಮಾಡಿದ ನೋಡಿ.....

''ಅಲ್ಲಾ ಅದೇನೋ ರೊಮಾನ್ಸ್ ವಿಷಯ ಹೇಳ್ತೀನಿ ಅಂದ್ರಿ....''

''... ಅದೇ ಅದೇ ರೊಮಾನ್ಸ್ ವಿಷಯಕ್ಕೆ ಬರ್ತ್ತೀನಿ ಸಿಸ್ಟರ್. ಇನ್ನೇನು ಬಂದುಬಿಟ್ಟ ಮೊದಲನೇ ಬಾಲು ಬೋಲ್ ಮಾಡಿದ್ದು ಹೇಳ್ತಾ ಇದ್ದೆ ಅಲ್ಲವೇ? ಮೊದಲನೇ ಬಾಲು ಬೋಲ್ ಮಾಡಿದ ನೋಡಿ ಬ್ಯಾಟ್ಸ್‌ಮನ್‌ಗೆ ಬಾಲೇ ಕಾಣಿಸದೇ ಹೋಯಿತು. ಬಾಲು ಕಾಣಿಸದೇ ಹೋದರೆ ಬ್ಯಾಟ್ಸ್‌ಮನ್ ಅದೇನು ಮಾಡ್ತಾನೆ? ಬರೀ ಗಾಳಿಗೆ ಬ್ಯಾಟ್ ಬೀಸಬೇಕು ಅಷ್ಟೇ. ಸಿಸ್ಟರ್ ಆಗಲೇ ನಿದ್ದೆ ಮಾಡಿಬಿಟ್ರಾ? ಗೋಪೀ ಆಚೆ ಬಾರಯ್ಯಾ. ಹತ್ತು ಗಂಟೇಗೆ ನೀನೇ ಗೇಟ್ ಬೀಗ ಹಾಕಿದ್ದು ನಾನು ನೋಡಿಲ್ಲ ಅಂತ ಅಂದ್ಕೊಂಡೆಯಾ? ಸಿಸ್ಟರ್‌ನ ಒಳಗೆ ಮಲಗಿಸಿ ಬಾ...' ಅಂದ. ಸಿಸ್ಟರು ರೊಮಾನ್ಸ್ ಕತೆ ಕೇಳುಕ್ಕೆ ಅಂತ ಹೋಗಿ ಕ್ಲೀನಾಗಿ ಬೋಲ್ಡ್ ಆಗಿಬಿಟ್ಟಿದ್ದಳು!

ನನ್ನವಳ ಈ ಮೊದಲ ಪ್ರಯತ್ನವೇ ಹೀಗೆ ಠುಸಕ್ ಅಂತ ಅಂದಿದ್ರಿಂದ ಇವಳು ಆವಾಗವಾಗ ಸಿಡುಕ್ತಿದ್ದಳೇ ಹೊರತು ಬೇರೆ ಉಪಾಯ ಚಿಂತಿಸಿರಲಿಲ್ಲ. ಅವನಿಗೂ ಹೆಂಡತಿ ಮನೇಲೇ ಇರಬೇಕಿತ್ತು. ಅವಳೂ ನಮ್ಮ ತರಹವೇ ಏಳು ತಿಂಗಳ ಬಸಿರಿ ಆಗಿರಬೇಕಿತ್ತು. ಆಗಲೂ ಹೀಗೇ ಬರ್ತಿದ್ದನೇನೋ ಆ ನಿಮ್ಮ ಪಿಶಾಚಿ...ಅಂತ ಆಗಾಗ ನನ್ನ ಮೇಲೆ ರೇಗೋಳು. ಅವಳ ಕೈಲಿ ಬೈಸಿಕೊಂಡು ಉಗುಳಿಸಿಕೊಂಡು ಈತನ ಕೈಲಿ ಕೊರೆಸಿಕೊಂಡು ಒಂದು ಥರಾ ರಿಟೈರ್ಡ್ ಫಾಸ್ಟ್‌ಬೋಲರ್ ತರಹ ಆಗಿಬಿಟ್ಟಿದ್ದೆ - ಷೇಪು ಕಳೆದುಕೊಂಡ ಬಾಲಿಗೂ ನನಗೂ ವ್ಯತ್ಯಾಸವಿಲ್ಲದ ಹಾಗೆ. ಕಾಲ ಹಾಗೇ ಇರುಲ್ಲ ನೋಡಿ. ಈತನ ಹೆಂಡತೀಗೆ ಇಲ್ಲಿಗೇ ಟ್ರಾನ್ಸ್‌ಫರ್ ಆಯಿತು. ಆಕೇನೂ ಗರ್ಭಿಣಿ ಆದಳು. ಆದರೂ ಇವನ ಮಧ್ಯರಾತ್ರಿಯ ಕಾಮೆಂಟರಿ ನಡೆದೇ ಇತ್ತು. ಒಂದು ರಾತ್ರಿ ಕಾಮೆಂಟರಿ ಬಿಡುಕ್ಕೆ ಅಂತ ಬಂದಿದಾನೆ - ಮಳೆ ಶುರು ಆಗಬೇಕೇ. ಮನೇಲೇ ಕುಕ್ಕರಿಸಿದ. ಕಾಮೆಂಟರಿ ಶಬ್ದಕ್ಕೆ ಮೂರು ತಿಂಗಳ ಕೂಸು ನಿದ್ದೆಯಿಂದ ಎದ್ದುಬಿಡ್ತು. ಇಡೀ ರಾತ್ರಿ ಮಗೂನ ಮಲಗಿಸಲು ನನ್ನವಳು ಪಟ್ಟಪಾಡು ಒಂದು ದೊಡ್ಡ ಪುರಾಣವೇ ಆದೀತು. ಮೂರನೇ ದಿವಸವೇ ನನ್ನವಳು ಆರ್ತರಿಸಿದಳು 'ಇನ್ನು ಮುಂದೆ ಪ್ರತಿ ಎರಡು ಮೂರು ದಿವಸಕ್ಕೆ ನೀವೇ ಅವನ ಮನೆಗೆ ಹೋಗಿ. ಅವನ ಕ್ರಿಕೆಟ್ ಪ್ರತಾಪ ಕೇಳಿಕೊಂಡು ಬನ್ನಿ. ಅವನ ಹೆಂಡತೀಗೂ ನಮ್ಮ ಕಷ್ಟ ಏನೂಂತ ತಿಳೀಲಿ. ಸರಿ ರಾತ್ರೀಲಿ ಹೀಗೆ ಗಂಡನ್ನ ಆಚೆ ಬಿಡ್ತಾಳೆ ಅಂದರೆ ಅದೇನು ಹೆಂಗಸೋ ಪಿಶಾಚೀನೋ ಬೇರೆಯವರು ಮಲಗಲಿ ಅನ್ನೋ ಸಿಂಪಲ್ ಥಿಂಕಿಂಗು ಬೇಡವೇ ಅವಕ್ಕೆ?...' ಅಂತ ಒಂದೂವರೆ ಗಂಟೆ ಗೆಳೆಯನ್ನ ಗೆಳೆಯನ ಹೆಂಡತಿಯ ವಂಶವನ್ನ ಜಾಲಾಡಿದಳು. ಮಧ್ಯೆ ನನ್ನ ವಂಶವೂ ಸೇರಿತು. ಇಷ್ಟೆಲ್ಲಾ ಆದ ನಂತರ

ಕೋಲೆ ಬಸವನ ಹಾಗೆ ಅದ್ಯಾವುದಾದರೂ ಗಂಡು ಪ್ರಾಣಿ ತಲೆ ಆಡಿಸದಿದ್ದರೆ ಆತನಿಗೆ ಪರಮವೀರ ಚಕ್ರ ಕೊಡಬೇಕು ಅಂತ ನನ್ನ ಇರಾದೆ. ನನಗೆ ಪರಮವೀರ ಚಕ್ರದ ಮೇಲೆ ಆಸೆ ಇಲ್ಲದ್ದರಿಂದ ಆಗಲಿ ಅಂತ ತಲೆ ಆಡಿಸಿದೆ.

ಈ ನಿರ್ಧಾರ ತೆಗೆದುಕೊಂಡ ಮಾರನೇ ದಿವಸವೇ ನಾನೂ ಒಂದು ಮ್ಯಾಚಿನಲ್ಲಿ ಆಡಿದೆ. ನನ್ನ ಮೊದಲ ಐದು ಓವರ್‌ನಲ್ಲಿ ಅರವತ್ತೆರಡು ರನ್ನು ಚಚ್ಚಿದ್ದರು. ನಾಲ್ಕು ಕ್ಯಾಚು ಬಿಟ್ಟಿದ್ದರು. ಒಬ್ಬ ಬೌಲ್ಡ್ ಆಗಿದ್ದ. ಆದರೆ ಅದನ್ನ ಅಂಪೈರು (ಹಾಳಾದೋನು) ನೋಬಾಲ್ ಅಂತ ಡಿಕ್ಲೇರ್ ಮಾಡಿಬಿಟ್ಟಿದ್ದ! ಬ್ಯಾಟಿಂಗ್‌ಗೆ ಅಂತ ಎಂಟನೇಯವನನ್ನಾಗಿ ಕಳಿಸಿದ್ದರು. ಎರಡು ಓವರುಗಳ ಕಾಲ ಕಾಲಿನಲ್ಲಿ ಬಾಲು ತಡೆದು ಮೂರು ರನ್ನು ಮಾಡಿದ್ದೆ. ಮೂರನೇ ಓವರಿನಲ್ಲಿ ರನ್ ಓಡಬೇಕಾದರೆ ಬಾಲು ವಿಕೆಟ್‌ಗೆ ಎಸೆದ ಫೀಲ್ಡರು. ವಿಕೆಟ್ಟಿಗೆ ಬಾಲು ತಗುಲುವ ಮೊದಲೇ ಕ್ರೀಸಿನಲ್ಲಿದ್ದರೂ ಅದೇ ಹಾಳು ಅಂಪೈರು ಔಟು ಅಂತ ಒಂದು ಬೆರಳು ಮೇಲೆತ್ತಿದ್ದ. ನಮ್ಮ ಟೀಮ್ ದಯನೀಯವಾಗಿ ನೂರ ತೊಂಬತ್ತೆರಡು ರನ್ನುಗಳಿಂದ ಸೋತಿತ್ತು. ಈ ಹಿನ್ನೆಲೆಯಲ್ಲಿ ರಾತ್ರಿ ಹನ್ನೆರಡೂ ಇಪ್ಪತ್ತಕ್ಕೆ ಗೆಳೆಯನ ಮನೆ ಸೇರಿದೆ. 'ರಾಜೂ...' ಅಂತ ಬಾಗಿಲು ತಟ್ಟಿದರೆ ಒಂದೇ ಕ್ಷಣದಲ್ಲಿ ತೆರೀತು. ಎದುರಿಗೆ ರಾಜೂನೇ ನಿಂತಿದ್ದ. 'ಬಾಬಾಬಾ ನೀನೇ ಬಂದೆಯಲ್ಲಾ. ನಾನೇ ನಿಮ್ಮನೇಗೆ ಹೊರಟಿದ್ದೆ. ಲೇ ಇವಳೇ ನಮ್ಮ ಗೋಪು ಬಂದಿದಾನೆ ನೋಡೇ' ಅಂತ ಅಂದ. ರೂಮಿನಿಂದ ಅವನಾಕೆ ನೈಟಿ ತೊಟ್ಟು ಹೊರಬಂದಳು. ''ಕೂತ್ಕೊಳ್ಳಿ ಗೋಪಣ್ಣ'' ಅಂತ ಉಪಚರಿಸಿದರು. ಟೀಪಾಯಿಯ ಈಕಡೆ ನಾನು ಆಕಡೆ ಅವರಿಬ್ಬರೂ ಕೂತರು. ಅದೇನು ಬೋಲಿಂಗ್ ಮಾಡಿದೆ ಇವತ್ತು? ಹಾಗಾ ವೈಡ್‌ಬಾಲ್ ಎಸೆಯೋದು? ವಿಕೆಟ್ಟಿನಿಂದ ನೂರು ಗಜ ದೂರ ಹೋಯ್ತಲ್ಲಾ? ಬ್ಯಾಟ್ಸ್‌ಮನ್‌ನ ರೈಟ್‌ಗೆ ಬಾಲ್ ಎಸೀಬಾರದು ಅಂತ ಗೊತ್ತಿಲ್ಲವಾ? ಹಾಗೆ ಎಸೆದರೆ ವರಿಗೆ ಹಬ್ಬ ಹಬ್ಬ ಗೊತ್ತಾ. ಆದೇ ಅವರ ಕಡೆ ಓಪನರು ಅದ್ಹೇಗೆ ಸಿಕ್ಸರ್ ಎತ್ತಿದ ನೋಡು.... ಅಂತ ಬೆಳಗಿನ ಜಾವ ನಾಲ್ಕೂ ನಲವತ್ತರವರೆಗೆ ನಾನು ಹೋಗ್ತೀನಿ ಅಂದರೂ ಬಿಡದೆ ಇಬ್ಬರೂ ಕೊರೆದರು, ಕೊರೆದರು ಕೊರೆದರು ಅಂದರೆ ಕೊರತು ಕಿತ್ತು ಹಾಕಿಬಿಟ್ಟರು.

ಅವರಿಂದ ಹೇಗೋ ತಪ್ಪಿಸಿಕೊಂಡು ಐದಕ್ಕೆ ಮನೆ ಸೇರಿದೆ. ಹೆಂಡತಿ ನನ್ನನ್ನ ನೋಡಿ ಭಯಪಟ್ಟಳು ಅಲ್ಲಲ್ಲಾದ್ರೂ, ಬಿದ್ರೇನ್ರೀ ಏಕೆ ಹೀಗಿದೆ ಮುಖ? ನೈಟ್ ಮ್ಯಾಚ್ ಆಡಿಬಂದಿರಾ! ಯಾಕೆ ಹೀಗೆ ಥರಥರ ಗುಟ್ಟುತ್ತಿದೀರೀ?... 'ಅಂತ ಅರ್ಧ ಪೂರ್ತಿ ಕಕ್ಕುಲತೆಯಿಂದ ಕೇಳಿದಳು. ಇವತ್ತು ಹೀಗ್ಹೀಗೆ ಆಯಿತು ಅಂತ ಗೆಳೆಯ ಆತನ ಹೆಂಡತಿ ನನ್ನನ್ನ ಹರಿದು ತಿಂದದ್ದು ಹೇಳಿದೆ. ನನ್ನ ಕಣ್ಣಲ್ಲಿ ನೀರು


ಬಂತು ಅಂತ ತೋರುತ್ತೆ. ಹೆಂಡತಿ ಬರೀ ಛೀ ಅಂದಳು! ಅವಳ ಮುಖದಲ್ಲಿ ನಗು ಇತ್ತೇ? ತಿಳಿದು.

... ಮನೆ ಮೇಲೆ ಒಂದು ರೂಮು ತುಂಬ ತುರ್ತಾಗಿ ಕಟ್ಟಿಸತಕ್ಕದ್ದು ಮತ್ತು ಗೆಳೆಯ ಬಂದಾಗಲೆಲ್ಲಾ ಆತನನ್ನು ಮಹಡಿ ಮೇಲಿನ ರೂಮಿನಲ್ಲಿ ಕೂರಿಸಿ ಪ್ರತಾಪ ಕೇಳತಕ್ಕದ್ದು (ಹೇಳುವುದೇನೂ ಇಲ್ಲವಲ್ಲ!) ಅಂತ ನಂತರದ ಎರಡೇ ದಿನದಲ್ಲಿ ತೀರ್ಮಾನಿಸಿದೆವು. ಈಗ ಭರದಿಂದ ರೂಮು ಕಟ್ಟಿಸುವ ಕೆಲಸ ಸಾಗಿದೆ!.... ಅಂತ ಕತೆ ಮುಗಿಸಿದ.

ಬಾಯಿ ಇದ್ದವರು ಬರದಲ್ಲೂ ಬದುಕ್ತಾರೆ ಅಂತ ಕೇಳಿದ್ದೆ.

ಬಾಯಿ ಇಲ್ಲದವರ ಪರಿಸ್ಥಿತಿ ಇಂತಹ ಮಟ್ಟಕ್ಕೂ ಹೋಗಬಹುದು ಅಂತ ನನಗೆ ತುಂಬಾ ವ್ಯಥೆಯಾಗಿದೆ! ಏಕೆಂದರೆ ನಾನೂ ಸಹ ನಿಮ್ಮೊಂದಿಗೆ ಬಾಯಿ ಇಲ್ಲದಾತ! ಕರೀ ಮೋಡದಲ್ಲೂ ಒಂದು ಬೆಳ್ಳಿ ಗೆರೆ ಇದ್ದೇ ಇರುತ್ತದೆ. ಒಂದೆರಡು ದಿನಗಳ ನಂತರ ಮತ್ತೆ ಈತ ಗೆಳೆಯನ ಹತ್ತಿರ ಕ್ರಿಕೆಟ್ ಹರಿಕತೆ ಬಿಡದಿದ್ದರೆ ಕೇಳಿ. ಚಟಗಳನ್ನು ಬಿಡುವುದು ಅಷ್ಟು ಸುಲಭವಲ್ಲವಂತೆ. ಹೇಳಿ ಕೇಳಿ ಕ್ರಿಕೆಟ್ಟಿನಂತರ ಚಟ ಬೇರೆ ಇಲ್ಲ ಅಂತ ಅದನ್ನ ಅಂಟಿಸಿಕೊಂಡವರಿಗೇ ಗೊತ್ತು!

★★★



ಹಾಸ್ಯೋತ್ಸವ ವಿ.ಸಿ.ಡಿ.ಗಳು

ಇದೀಗ ಬಿಕರಿಗೆ ಸಿದ್ಧವಾಗಿವೆ

ಹಾಸ್ಯೋತ್ಸವ 2K2 (ಡಿಸೆಂಬರ್ 2002)
ದಾಶರಥಿ ದೀಕ್ಷಿತ್ ಸಂಸ್ಮರಣೆ

ಹಾಸ್ಯೋತ್ಸವ 99 (ಡಿಸೆಂಬರ್ 1999) ಬೀಚೀ ಸಂಸ್ಮರಣೆ

ಹಾಸ್ಯೋತ್ಸವ 98 (ಡಿಸೆಂಬರ್ 1998) ರಾಶಿ ರತ್ನ ಸಂಸ್ಮರಣೆ

ವಿ.ಸಿ.ಡಿ. ಗಳಿಗೆ ಇಲ್ಲಿ ಸಂಪರ್ಕಿಸಿ

ಬೇಲೂರು ರಾಮಮೂರ್ತಿ ಫೋನ್: 3360284
ಕೃಷ್ಣ ಸುಬ್ಬರಾವ್ ಫೋನ್: 3232849

ಅಪರಂಜಿ ವಿತರಣೆಗೆ ಏಜೆಂಟರು ಬೇಕಾಗಿದ್ದಾರೆ

ಬೇರೆ ಬೇರೆ ಊರುಗಳಲ್ಲಿ ಅಪರಂಜಿ ಮಾಸಪತ್ರಿಕೆಯನ್ನು
ಮಾರಾಟ ಮಾಡಲು ಏಜೆಂಟರು ಬೇಕಾಗಿದ್ದಾರೆ.
ಆಕರ್ಷಕ ಕಮಿಷನ್ ಉಂಟು. ಹಾಸ್ಯಾಸಕ್ತರು
ಅಗತ್ಯವಾಗಿ ಈ ಸದವಕಾಶವನ್ನು
ಉಪಯೋಗಿಸಿಕೊಳ್ಳಬಹುದು.

ವಿವರಗಳಿಗೆ ಇಲ್ಲಿ ಸಂಪರ್ಕಿಸಿ

ಶ್ರೀ ಬೇಲೂರು ರಾಮಮೂರ್ತಿ
313/8, 7ನೇ ಮೇನ್, ವೈಯ್ಯಾಲಿಕಾವಲ್
ಬೆಂಗಳೂರು - 560 003, ಫೋನ್: 3360284

ಹೆಂಡತಿಯ ಹಕ್ಕು

- ಶ್ಯಾಮಲ ರವಿಶಂಕರ್

ಮೊನ್ನೆ ಮೊನ್ನೆ ವಾರ್ತಾ ಪತ್ರಿಕೆಗಳಲ್ಲಿ ಓದಿದ ನೆನಪು - ಪ್ರಜಾಪ್ರತಿನಿಧಿಯೊಬ್ಬ ಸತ್ತು ಹೋದರೆ ಅವನ ಹೆಂಡತಿಗೆ ಚುನಾವಣೆಗೆ ನಿಲ್ಲಲು ಟಿಕೆಟ್ ಕೊಡುತ್ತಾರೆಂದು ಎಂಥಾ ಒಳ್ಳೆಯ ಆಲೋಚನೆ! ನಿಜವಾಗಿಯೂ ಮೆಚ್ಚಬೇಕಾದದ್ದೇ!

ಈ ಕೆಲವು ಆಫೀಸುಗಳಲ್ಲಿ compassionate grounds ನ ಮೇರೆಗೆ ಉದ್ಯೋಗಗಳನ್ನು ವಂಶಪಾರಂಪರ್ಯವಾಗಿ ನಡೆಸಿಕೊಳ್ಳುತ್ತಾರಲ್ಲಾ ಹಾಗೆ. ಆದರೆ ಇದು ಆಫೀಸರುಗಳ ಸಂಸಾರಕ್ಕಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಪ್ರಜಾಪ್ರತಿನಿಧಿಗಳು ಆಫೀಸರುಗಳೆಂದು ಯಾರು ಹೇಳಿದರು. ಇಷ್ಟಕ್ಕೂ ಅವರ ಸಂಬಳ ತಿಂಗಳಿಗೆ ಒಂದು ರೂಪಾಯಿಯಿಂದ 2,500/- ರೂಪಾಯಿಗಳವರೆಗೂ ಇದ್ದರೆ ಹೆಚ್ಚು ಅಲ್ಲವೇ? ಅದಕ್ಕೇ ಇರಬೇಕು, ಟಿಕೇಟ್‌ನ ಈ ಮೀಸಲಾತಿ.

ರಾಜಕಾರಣಿ ಯಾವುದೇ ಕಾರಣದಿಂದ - ವಿಮಾನ / ರಸ್ತೆಯ ಅಪಘಾತ ಹೃದ್ರೋಗ ಅಥವಾ ಇನ್ಯಾವುದೇ ಕಾಯಿಲೆಯಿಂದಾದರೂ - ಸತ್ತರೂ ಅವನ ಹೆಂಡತಿಗೆ ಆ ಜನ್ಮ ಹಕ್ಕು ಗಂಡನ ಕುರ್ಚಿ (ಮುತ್ತೈದೆಯಾಗಿಯೇ ಗಂಡನ ಕುರ್ಚಿ ಅಲಂಕಿಸುತ್ತಿರುವ ರಾಬ್‌ರಿ ದೇವಿ ಒಂದು exception ಅಂಬೋಣ).

ಮತದಾರರನ್ನು emotioally exploit ಮಾಡುತ್ತಾರೆ ಟಿಕೆಟ್ ಕೊಡುವವರು ಎಂಬುದು ಶುದ್ಧ ಸುಳ್ಳಂತೆ. ಮತದಾರರ ಬೇಡಿಕೆಯೇ ಇದಕ್ಕೆ ಮೂಲ ಎಂದು ಬಹಿರಂಗ ಸಭೆಯಲ್ಲಿ ತಿಳಿದು ಬಂದಿದೆ!

ಗಂಡ ಬದುಕಿದ್ದಾಗ ಅವನ ತರಲೆ, ತಲೆ ನೋವುಗಳ ಕಡೆಗೆ 'ಕ್ಯಾರೇ' ಅನ್ನದ ಈ ಹೆಂಗಸರು ಕುರ್ಚಿಯಲ್ಲಿ ಕೂತಾಕ್ಷಣ ಎಷ್ಟು ಬೇಗ ಚಿಗರಿ ಬಿಡುತ್ತಾರೆ! ಅದೇ ಅಲ್ಲವೆ ಪ್ರಗತಿ ಪರತೆ?

ಇತ್ತ ಹಲವಾರು weak minded ಗಂಡುಗಲಿಗಳಿಂದ ರಾಜಕಾರಣಿಗಳಿಗೆ ಒಂಥರಾ syndrome ಬಂದ್ಬಿಟ್ಟಿದೆಯಂತೆ. ಅವರ ರೋಗಕ್ಕೆ ಮದ್ದಿಲ್ಲ ಎನ್ನುತ್ತಾರೆ ಮನೋವೈದ್ಯ ಡಾ॥ ಹುಚ್ಚಪ್ಪನವರು. ಇವರ ಪ್ರಕಾರ ಆ ರೋಗದ ಲಕ್ಷಣಗಳೇನಪ್ಪಾ ಅಂದರೆ ಹಸಿವಿರುವುದಿಲ್ಲ (ಹಾಗೇಂತ ಸಣ್ಣಕ್ಕಾಗೊಲ್ಲ) ನಿದ್ದೆಯಿಲ್ಲ (ರಾತ್ರಿಯಲ್ಲಿ), (ಈಗ ಹೇಳಿದ್ದು ಮರುಕ್ಷಣ) ಜ್ಞಾಪಕವಿರುವುದಿಲ್ಲ. ಇದ್ದಕ್ಕಿದ್ದಂತೆ ಬೆಚ್ಚಿ ಬೀಳುವುದು, ಇತ್ಯಾದಿ.

ಎಲ್ಲಾ ತಪಾಸಣೆ ಮಾಡಿದ ಮೇಲೆ ಅವರಿಗೆ ಬೇರೇನೂ ರೋಗವಿಲ್ಲವೆಂದೂ ತಿಳಿಸಿದ್ದಾರೆ ಡಾ|| ಹುಚ್ಚಪ್ಪನವರು. ಆದರೆ ಹೆಂಡತಿ ಮಾಡಿದ ಅಥವಾ ಮಾಡಿಸಿದ ಅಡಿಗೆ ತಿಂದರೆ ಸತ್ತುಹೋಗುವೆನೆಂಬ ಭಯ. ಅದಕ್ಕೆ ಹಸಿವಿಲ್ಲ ಎಂದು, ಹೊಟ್ಟೆ ಚುರುಗುಟ್ಟಿದಾಗ ಪಂಚತಾರಾ ಹೋಟಲುಗಳಿಂದ high fat ಊಟ ಪ್ಯಾಕೆಟ್ ತರಿಸಿಕೊಂಡು, ತಿಂದು (ದಪ್ಪಕ್ಕಾಗಿ) ಮರಳುತ್ತಾರೆ ಮನೆಗೆ. ನಿದ್ದೆಯಲ್ಲಿ ಏನಾದರು ಅನಾಹುತ ನಡೆದು ಬಿಡುತ್ತದೆಂಬ ಹೆದರಿಕೆಯಿಂದ ರಾತ್ರಿಯಲ್ಲಿ ನಿದ್ದೆ ಮಾಡೊಲ್ಲ, ಆದ್ದರಿಂದ ಸಭೆ - ಸಂಸತ್‌ಗಳಲ್ಲಿ ತೂಕಡಿಕೆ ಹಸಿವಿಲ್ಲ, ನಿದ್ದೆ ಮಾಡಿಯಾಯಿತು' ಎಂಬೆಲ್ಲ ಸುಳ್ಳು ಸರಪಣಿ ಹೇಳಬೇಕಾಗಿ ಬರತ್ತಲ್ಲ, ಅದಕ್ಕೆ ಆಗಾಗ ಬೆಚ್ಚಿ ಬೀಳುತ್ತಾರೆ.

ಒಟ್ಟಿನಲ್ಲಿ ಹೆಂಡತಿ (ಮುಂದೆ ತನ್ನ ಪಕ್ಷದ ಟಿಕೇಟ್ ಪಡೆಯಬಹುದಾದರೂ) ವಿರೋಧ ಪಕ್ಷ ಅನ್ನೋ ಹಾಗೆ ವರ್ತಿಸ್ತಾರೆ! ಇವೆಲ್ಲ ಎಷ್ಟೊಂದು ತ್ರಾಸದಾಯಕ! ಇವೆಲ್ಲ ಒತ್ತಡಗಳಿಂದ ಹೃದಯಾಘಾತಕ, ತನಗೆ ಪರಲೋಕಕ್ಕೆ ಟಿಕೆಟ್ ಸಿಕ್ಕಿತೋ, ಹೆಂಡತಿಗೆ ರಾಜಕೀಯ ಟಿಕೆಟ್ ಶ್ಯೂರ್!

ಅದಕ್ಕೆ ಮದ್ದಿಲ್ಲದೇ ಇಲ್ಲ. ಆದರೆ ಆ ಮದ್ದು ಡಾಕ್ಟರುಗಳ ಕೈಲಿಲ್ಲ. ಒಂದು ಉಪಾಯ: ಈ ಪದ್ಧತಿಯನ್ನು ರದ್ದು ಮಾಡುವುದು. ಇದೆಲ್ಲ ಆಗು ಹೋಗುವ ಮಾತಲ್ಲ ಎಂದಿರೋ, ತೊಗೊಳ್ಳಿ ಇನ್ನೊಂದು ಉಪಾಯ: ಬ್ರಹ್ಮಚಾರಿಗಳಾಗಿ ಉಳಿದರೆ ಅತ್ಯುನ್ನತ ಸ್ಥಾನಗಳನ್ನು ನಿರಾತಂಕವಾಗಿ ಅಲಂಕರಿಸುವ ಸದವಕಾಶ ಬರುವವರೆಗೂ ಬದುಕಬಹುದು.

ಅಯ್ಯೋ, ಪಾಪವೇ

- ಕಮಲಾ ರಾಮಸ್ವಾಮಿ

''ಹಲೋ, ಯಾರೂ? ಯಾವ ಲಲಿತು! ಆಂ. ತಿಳೀತು ಬಿಡು. ನಂ ಅಚ್ಚಕ್ಕನ ಮಗಳು ಲಲಿತು ತಾನೇ'' ಅಬ್ಬಾ, ಅಂತೂ ಪತ್ತೆ ಹಚ್ಚಿದ್ದಾಯಿತು. ಮುಂದಿನ ಮಾತಿನ ಸರಣಿ ಹೇಳಲೇ ಬೇಡವೇ ಎಂಬ ಯೋಚನೆ ಕಾಡಿತು... ಇರಲಿ, ಏನು ಹೇಳಬೇಕೋ ಅಷ್ಟನ್ನೇ ಹೇಳುತ್ತೇನೆ. ಲಲಿತು ನನ್ನ ಸೋದರಮಾವನ ಮಗಳು. ನಮ್ಮಿಬ್ಬರಿಗೂ ಗಳಸ್ಯ, ಕಂಠಸ್ಯ. ಒಂದೇ ಓರಿಗೇ, ಒಟ್ಟಿಗೇ ಓದಿದವರು. ಹಾಗಾಗಿ ಸಂಬಂಧಕ್ಕಿಂತ ಗೆಳೆತನವೇ ಹೆಚ್ಚು. ಆರು ತಿಂಗಳಿಗೋ, ವರ್ಷಕ್ಕೋ ಭೆಟ್ಟಿಯಾದರೂ ಸರಸ, ಸಲಿಗೆ ಬಹಳ. ಅವಳು ನೆಲಮಂಗಲ, ನಾನು ಬೆಂಗಳೂರು. ಅವಳ ತೌರು ವಿಜಯನಗರ... ಅಲ್ಲಿಗೆ ಬಂದಾಗಲೆಲ್ಲಾ ನನಗೆ ಫೋನ್ ಮಾಡಿ 'ಹಲೋ' ಎನ್ನುವುದು ಮಾಡಿಕೆ. ಇಂದೂ ಹಾಗೆಯೇ ಮಾಡಿದ್ದಾಳೆ ಎಂದುಕೊಂಡೆ, ಅಲ್ಲ. ಬಹಳ ಸ್ವಾರಸ್ಯವಾದ ವಿಷಯ ಹೇಳಿದಳು.

''ನೋಡು ಕಮ್ಲೂ, ನಂ ಊರಿನ ಹತ್ತಿರ ಇರೋ ಆ ಸದ್ಗುರು ಜಗದಾನಂದಕರ ಆಶ್ರಮಕ್ಕೆ ಸ್ವಾಮೀಜಿಗಳು ಮುಂದಿನ ಶನಿವಾರ ಬರ್ತಾರಂತೆ. ನೀನು ಅವರನ್ನ ನೋಡಬೇಕು, ಹಲವು ವಿಷಯಗಳ್ನ ತಿಳ್ಕೊಬೇಕು ಅಂತಿದ್ಯಲ್ಲಾ, ಅದಕ್ಕೇ ನಾನೀಗ ಫೋನ್ ಮಾಡಿದ್ದು'' ಅಂದ್ಲು.

''ಆದರೆ ಮುಂದಿನ ಶುಕ್ರವಾರ ಶ್ರೀಕಂಠಯ್ಯನ ಭೀಮರಥ ಶಾಂತಿ ಅಲ್ವೇ?''

''ಇರಲಿ, ಅದಕ್ಕೆ ನೀನೇನು ಮಾಡ್ಬೇಕು ಊಟಕ್ಕೆ ಹೋಗಿ ಬರೋದೊಂದು ಬಿಟ್ಟು' ಮಾರನೇ ದಿನ ಬೆಳಿಗ್ಗೆ ತಾನೆ ನೀನು ಬರೋದು. ಏಳು ಘಂಟೆಗೆ ಅಲ್ಲಿದ್ರೆ ಸಾಕು.''

''ನೀನು ಬರೋಲ್ವೇ. ನಾನೊಬ್ಬಳೇ ಹೋಗಬೇಕೇನು. ನನಗಲ್ಯಾರೂ ಗುರುತಿಲ್ಲ, ಪರಿಚಯವಿಲ್ಲ''...

''ಅಯ್ಯೋ ರಾಮ, ಅದ್ಯಾಕೆ ಹಾಗಾಡ್ತಿ. ನಾನೂ ಅಲ್ಲಿಗೆ ಏಳು ಘಂಟೆಗೆ ಮುಂಚೆಯೇ ಬಂದ್ರೆ, ಸರಿ ತಾನೇ!''

''ನೀನು ಈಗ್ತಾನೆ ಶಶಿ ಮಗಳ ಮದ್ವೆಗೆ ಮೈಸೂರಿಗೆ ಹೋಗ್ತೀನಿ ಅಂದೆ. ಅದೂ ಶುಕ್ರವಾರ ತಾನೇ?''

''ಹೌದು ಕಣೆ. ಮದ್ವೆ ಮುಗ್ಸಿಕೊಂಡು ಬೆಳಿಗ್ಗೆ ಫಸ್ಟ್ ಬಸ್ಸಿಗೇ ಹೊರಟು ಆರೂವರೆಗೆಲ್ಲಾ ಆಶ್ರಮದ ಬಾಗ್ಲಲ್ಲಿ ನಿಂಗೋಸ್ಕರ ಕಾದಿರ್ತೀನಿ ಆಯ್ತೇ.''

''ಖಂಡಿತ ಬಂದಿರ್ತೀಯಲ್ವಾ. ನಿನಗೆ ಗೊತ್ತಲ್ವಾ ನನ್ನ ಕೀಳರಿಮೆ ಸ್ವಭಾವ!''

''ಅಬ್ಬಬ್ಬಾ. ಅಮೇರಿಕಾಗೋ, ಆಫ್ರಿಕಾಗೋ ಒಬ್ಳೇ ಹೋಗೋಳ ಹಾಗೆ ಆಡ್ತೀಯಲ್ಲಾ. ಖಂಡಿತ ಬಂದಿರ್ತೀನಿ ಬೈ ಬೈ''

★★★

ಬೆಳಿಗ್ಗೆ ನಾಕೂವರೆಗೆಲ್ಲಾ ಎದ್ದೆ. ಸೀರೆ ಯಾವುದನ್ನ ಉಡಲಿ ಎಂಬ ಚಿಂತೆ ಕಾಡಿತು. ಕಾಟನ್ ಉಟ್ಟರೆ, ಹಾಯಾಗಿದ್ದರೂ. ಮುದುರುತ್ತೆ. ಗುರು ಹಿರಿಯರನ್ನು ನೋಡಲು ಹೋಗುವಾಗ ರೇಷ್ಮೆ ಸೀರೆಯೇ ಲಕ್ಷಣವಾಗಿರುತ್ತೆ. ಹಳದಿ ಅಂಚಿನ ಕೆಂಪು ಕಪ್ಪು ಚೌಕಳಿ ಸೀರೆ, ಹಳದಿ ಜರಿಯಂಚಿನ ರವಿಕೆ, ಸ್ವಲ್ಪ ದೊಡ್ಡದಾದ ಕುಂಕುಮ, ಗಾಜಿನ ಬಳೆ, ಮುಡಿಗೆ ಮಲ್ಲಿಗೆ ಹೂ. ಎಲ್ಲಾ ಸಂಪ್ರದಾಯದ ಶೃಂಗಾರ ಮಾಡಿಕೊಂಡು ಹೊರಟೆ. ಟ್ಯಾಕ್ಸಿ ಹೊತ್ತಿಗೆ ಸರಿಯಾಗಿ ಬಂತು. ಎಲ್ಲಾ ವೇಳೆಗೆ ಸರಿಯಾಗಿ ಆಯಿತು. ಹೊರಟ ಹೊತ್ತು ಒಳ್ಳೇದಾಗಿದೆ, ಹಾಗೆ ಆ ಗುರುಗಳ ದರ್ಶನವೂ ಆಗಿ ನನ್ನ ಅನುಮಾನ, ಆತಂಕಗಳಿಗೆ ನನಗೆ ಸಮಾಧಾನವಾಗುವ ಹಾಗೆ ಪರಿಹಾರ ಸಿಕ್ಕಿದರೆ ಈ ಟ್ರಿಪ್ ಮಾಡಿದ್ದಕ್ಕೆ ಸಾರ್ಥಕ ಎಂದುಕೊಂಡೆ.

ರಸ್ತೆವುದ್ದಕ್ಕೂ ಪ್ರಶ್ನೆಗಳನ್ನು ಹೇಗೆ ಕೇಳಬೇಕು, ಯಾವ ಭಾಷೆ, ಜೊತೆಗೆ ಒಂದು ಸಂದರ್ಶನವನ್ನೂ ಸೇರಿಸಿದರೆ ಹೇಗೆ, ಹೀಗೆ ಯೋಚಿಸುತ್ತಿರುವಾಗಲೇ, ''ಮೇಡಂ, ಆಶ್ರಮ ಬಂತು'' ಎಂದ ಡ್ರೈವರ್. ''ಹೌದೇ. ಸರಿ, ನೀವಿಲ್ಲೇ ಇರಿ, ನನ್ನ ಕೆಲಸ ಮುಗಿದ ತಕ್ಷಣ ಬರ್ತೀನಿ'' ಎಂದೆ. ಆಯಿತು ಮೇಡಂ. ಗಾಡಿ ನಂ. 1198. ಪಾರ್ಕಿಂಗ್ ಬೋರ್ಡಿನ ಕೆಳಗೇ ನಿಲ್ಲಿಸಿರುತ್ತೇನೆ'' ಎಂದು ಬಹಳ ವಿನಯವಾಗಿ ಹೇಳಿದ.

ಆಶ್ರಮದ ದೊಡ್ಡ ಗೇಟನ್ನು ಇನ್ನೂ ತೆರೆದಿರಲಿಲ್ಲ. ಸಣ್ಣ ಗೇಟ್ನಲ್ಲೇ ಹೋದೆ. ದೊಡ್ಡ ಬಯಲು. ಬೇಕಾದಷ್ಟು ಮರ, ಗಿಡಗಳು, ತುಂಬಾ ಚೆಲುವಾಗಿದ್ದ ಹೂದೋಟ. ಆಗ ತಾನೇ ಸೂರ್ಯೋದಯವಾಗುತ್ತಿತ್ತು. ಪಕ್ಕಿಗಳ ಚಿಲಿಪಿಲಿ, ತಣ್ಣಗಿನ ಮುಂಜಾನೆಯ ಹಿತವಾದ ಗಾಳಿ, ಎಲ್ಲಾ ನನ್ನನ್ನು ಬೇರೆ ಲೋಕಕ್ಕೆ ಒಯ್ದುವು. ಅಷ್ಟರಲ್ಲಿ ಕಾಕಿ ಆಸ್ತ್ರಧಾರಿ ಕಾವಲುಗಾರ ಬಂದ.

''ಕ್ಷಮಿಸಿ, ನಿಮ್ಮ ಪಾಸ್ ತೋರಿಸುವಿರಾ'' ಎಂದ. ನನಗೆ ಕಿಟ್ಟಿ ಗಾಭರಿಯಾಯ್ತು. ಈ ಲಲಿತು ಮಾಡುವ ಕೆಲಸವೆಲ್ಲಾ ಓಗೇಯಾ. ಪಾಸ್ ಬಗ್ಗೆ ಮಾತೇ ಆಡ್ಲಿಲ್ಲ ಅವಳು... ಅವಳು ಬಂದು ಕಾಯ್ತೀನಿ ಅಂದಿದ್ಲಲ್ಲಾ!

''ನನ್ನ ಸ್ನೇಹಿತೆ ಮಿಸೆಸ್ ರಾವ್ ಹತ್ರ ಪಾಸ್ ಇದೆ. ಅವರಾಗ್ಲೇ ಬಂದಿರಬಹುದು''....

''ಇಲ್ಲಮ್ಮ! ಯಾರೂ ಬಂದಿಲ್ಲ. ಇಲ್ಲಿ ಆಫೀಸ್ ತೆಗೆಯುವುದೇ ಏಳು ಗಂಟೆಗೆ'' ಎಂದ.

''ಓ! ಸರಿ ಹಾಗಾದರೆ, ನಾನು ಅವರು ಬರೋ ತನಕ ಕಾರಿನಲ್ಲೇ ಕಾಯ್ತೀನಿ'' ವಾಪಸ್ಸು ಹೊರಟೆ. ಆ ಲಲಿತುಗೆ ಮನಸ್ಸಿನಲ್ಲೇ ಹಾಕಿದ ಶಾಪ ಅವಳಿಗೇನಾದರೂ ತಟ್ಟಿದ್ದರೆ ಅವಳು ಸುಟ್ಟು ಭಸ್ಮವಾಗುತ್ತಿದ್ದಳು.


''ಛೇ, ಛೇ, ನಾನು ನೀವು ಹೋಗಿ ಎನ್ನಲಿಲ್ಲಮ್ಮ. ಒಳಗೆ ಹೋಗಲು ಪಾಸ್ ಬೇಕು ಎಂದೆ ಅಷ್ಟೇ. ನೀವು ಅಲ್ಲಿರೋ ರಿಸೆಪ್ಷನ್ ಹಟ್‌ನಲ್ಲಿ ಕೂತಿರಬಹುದು'' ಎಂದು ಸ್ವಲ್ಪ ದೂರದಲ್ಲಿದ್ದ ಗೋಲಾಕಾರದ ಗುಡಿಸಿಲನ್ನು ತೋರಿಸಿದ.

''ತುಂಬಾ ಥ್ಯಾಂಕ್ಸ್'' ಅಂತ ಹೇಳಿ ಅಲ್ಲಿಗೆ ಹೊರಟೆ.

ಆ ಗೋಲಾಕಾರದ ಗುಡಿಸಲು ಬಲು ನವೀನವಾಗಿತ್ತು. ಆರು ಚಿಕ್ಕ ಚಿಕ್ಕ ಕೋಣೆಗಳು ಸುತ್ತಲೂ ಇತ್ತು. ಪ್ರತಿ ಕೋಣೆಯ ಮಧ್ಯ ಹೂ ಗಿಡಗಳು, ತೆರೆದ ಅಂಗಳ, ಪ್ರತಿ ಕೋಣೆಗೂ ಪುಟ್ಟ ಪುಟ್ಟ ಕಿಟಕಿಗಳು. ಎಲ್ಲಾ ಮುಚ್ಚಿದ್ದವು. ಕಿಟಕಿಗಳ ಕೆಳಗೆ ಕಲ್ಲು ಬೆಂಚುಗಳು. ಎಲ್ಲಾ ಪಾಲಿಷ್ಡ್ ಗ್ರ್ಯಾನೈಟ್. ಎದುರಿಗೆ ಸೂರ್ಯೋದಯದ ಚೆಲುವು! ಅಲ್ಲೇ ಇದ್ದ ಬೆಂಚಿನ ಮೇಲೆ ಕುಳಿತು ಮೂಡಲ ಮನೆಯ ರಮಣೀಯ ದೃಶ್ಯವನ್ನು ನೋಡುತ್ತಾ ಮೈಮರೆತೆ.

ಜನ ಒಬ್ಬೊಬ್ಬರಾಗಿ ಬರಲು ಶುರುವಾಯ್ತು... ಕೆಲವರು ನೇರವಾಗಿ ಒಳಗೆ ಹೋದರು. ನಾನು ಕೂತ ಜಾಗಕ್ಕೇ ಕೆಲವರು ಬಂದು ಬೆಂಚುಗಳ ಮೇಲೆ ಕುಳಿತರು. ಎಲ್ಲರೂ ನನ್ನ ಮುಖ ನೋಡಿ ಹುಬ್ಬೇರಿಸುವವರೇ! ಒಬ್ಬಿಬ್ಬರು ಹೆಂಗಸರು ನನ್ನನ್ನು ನೋಡಿಕೊಂಡೇ ಪಿಸಪಿಸ ಗುಸುಗುಸು ಮಾತಾಡಿಕೊಂಡರು... ಒಬ್ಬಾಕೆ ನನಗೆ ಕೇಳಿಸುವ ಹಾಗೆ! ಅಯ್ಯೋ ಪಾಪವೇ! ಅಂತ ಉದ್ಗರಿಸಿದರು. ನನಗೇನಾಗಿದೆ. ನನ್ನ ಅಲಂಕಾರ ಕಂಡೇ. ಅದು ವಯಸ್ಸಿಗೆ ಸರಿಯಾಗೇ ಇದೆ.

ಅಷ್ಟರಲ್ಲಿ ಒಬ್ಬ ಹಿಪ್ಪಿ ಬಂದ. ಪಕ್ಕದಲ್ಲೇ ಕುಳಿತು ನನ್ನ ಕೈ ಹಿಡಿದು ''ಇಟ್ಸ್ ಓಕೆ'' ಅಂದ. ನನಗೆ ಅರ್ಥವಾಗಲಿಲ್ಲ. ಇವರಿಗೆಲ್ಲಾ ನನ್ನ ಮೇಲೆ ಏಕೆ ಕನಿಕರ! ಮರುಕ ಅಂತ ಯೋಚಿಸುತ್ತಿದ್ದೆ. ಏಳು ಗಂಟೆ ಹೊಡೆಯಿತು. ದೊಡ್ಡ ಗೇಟ್ ತೆರೆಯಿತು, ಅಲ್ಲೇ ಆ ನನ್ನ ಗೆಳತಿಯ ಮುಖ ಕಾಣ್ತು. ಅಷ್ಟರಲ್ಲಿ ಆ ಕೋಣೆಗಳ ಕಿಟಕಿ ಬಾಗಿಲೆಲ್ಲಾ ತೆರೆದವು. ನಾನು ಕೂತಿದ್ದ ಕಿಟಕಿ ಒಳಗಿಂದ ಇಂಪಾದ ಹೆಣ್ಣುಧ್ವನಿ 'ಹೌ ಕೆನ್ ಐ ಹೆಲ್ಪ್ ಯೂ' ಎಂದಳು ನಾನು ಗಡಿಬಿಡಿಯಿಂದ ಎದ್ದೆ. ''ಡೋಂಟ್ ಗೆಟ್ ಪರ್ಟ್ಬ್ಡ್, ಇಟ್ ಇಸ್ ಆಲ್‌ರೈಟ್'' ಅಂದಳು ಆಕೆ. ಅಷ್ಟರಲ್ಲಿ ಲಲಿತು ಓಡಿ ಬಂದಳು. 'ಇಲ್ಯಾಕೆ ಕೂತೆ, ಮೇಲಿನ ಬೋರ್ಡು ನೋಡ್ಬೇಡ್ವೇ'' ಅಂದಳು. ತಲೆ ಎತ್ತಿ ನಾನು ಕೂತ ಕಿಟಕಿಯ ಮೇಲಿನ ಫಲಕ ನೋಡಿದೆ. ಈಗ ಅರ್ಥವಾಯಿತು ಎಲ್ಲರ ಮರುಕ, ಕನಿಕರ, ಅಯ್ಯೋ ಪಾಪವೇ ಏಕೆ ಅಂತ! ಕಿಟಕಿಯ ಮೇಲಿನ ಫಲಕದಲ್ಲಿ 'ಏಡ್ಸ್ ತಪಾಸಣೆ' ಎಂದಿತ್ತು...





ಕ್ರಿಕೆಟ್ ವೈಚಿತ್ರ್ಯಗಳು

- ಎಂ.ಆರ್. ರಘುನಾಥ್

ಈ ಆಟವೇ ಹೀಗೆ
ಬಲು ವಿಚಿತ್ರ

1. ಬಾಲ್ ಇದ್ದರೂ ''ನೋ ಬಾಲ್''
2. ವಿಶಾಲ ಮೈದಾನವಿದ್ದರೂ, 'ಗಲ್ಲಿ'ಯಲ್ಲೇ ನಿಲ್ಲುವುದು
3. ವಿಕೆಟ್ ಇರುವುದು ಮೂರೇ (ಆರೇ) ಆದರೂ ಬೀಳುವುದು ಹತ್ತು
4. ಎರಡು ಕಾಲುಗಳು ಸರಿಯಾಗಿದ್ದರೂ, ಒಬ್ಬನಿಗೆ ''ಷಾರ್ಟ್‌ಲೆಗ್''
5. ಎಷ್ಟೇ ಚತುರನಾಗಿದ್ದರೂ, ಅವನಿಗೆ 'ಸಿಲ್ಲಿ ಪಾಯಿಂಟ್'
6. ಹಗಲಿನಲ್ಲೇ ಆಡಿದರೂ, ಅವನು 'ನೈಟ್ ವಾಚ್‌ಮನ್'
7. "caught' ಎಂದಾಕ್ಷಣ ಪೋಲೀಸ್ ವಿಚಾರಣೆ ಇಲ್ಲದೆ ''ಔಟ್''
8. ಅಂಪೈರ್ ಎಷ್ಟೇ ತಪ್ಪು ಮಾಡಿದರೂ ಅವನು ''ನಾಟ್ ಔಟ್''
9. ಪಂದ್ಯ-ಸರಣಿ ಸೋತರೂ ಹಣದ ಸುರಿಮಳೆ




STRIKING POWER
Down Hole Hammers
&
Button Bits

Reg. No.: CPMG/KA/BGW-544/2003-05

Printed by V.R NATH for the Publisher KORAVANJI APARANJI TRUST. Published by KORAVANJI APARANI TRUST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR